## ಅಧ್ಯಾಯ – II

# ಸಂಸ್ಕೃತಿ, ಸಾಮಾಜೀಕರಣ ಮತ್ತು ಅಸ್ಮಿತೆ

ವಾಸ್ತವದಲ್ಲಿ, ಸಾಮಾಜಿಕ ಅಸ್ಮಿತೆ ಇಲ್ಲದೆ ಸಮಾಜವಿರುವುದು ಸಾಧ್ಯವಿಲ್ಲ

– ಜೆಂಕಿನ್ಸ್, 1996

ಸಂಸ್ಕೃತಿ – ಕಾರ್ಯಾತ್ಮಕವಾದಿ ದೃಷ್ಟಿಕೋನಗಳು

ಸಂಸ್ಕೃತಿ ಮತ್ತು ಅಸ್ಮಿತೆಯ ಮಾರ್ಕ್ಸ್‌ವಾದಿ ಸಿದ್ಧಾಂತಗಳು

ಕಲೆಗಳ ಕುರಿತು ಮಾರ್ಕ್ಸ್‌ವಾದಿ ಸಿದ್ಧಾಂತಗಳು

ಸಂಸ್ಕೃತಿಯ ನವ-ಮಾರ್ಕ್ಸ್‌ವಾದಿ ಸಿದ್ಧಾಂತಗಳು

ಸಮೂಹ ಸಂಸ್ಕೃತಿ

ಜಾಗತಿಕ ಸಂಸ್ಕೃತಿ

ರಚನಾವಾದ

ರಚನೋತ್ತರವಾದ

ಆಧುನಿಕತೆ, ಆಧುನಿಕೋತ್ತರತೆ, ಜಾಗತೀಕರಣ ಮತ್ತು ಸಂಸ್ಕೃತಿ

ಸಾಮಾಜೀಕರಣ

ಅಸ್ಮಿತೆ

ಅನುಭೋಗವಾದ, ವೈಯಕ್ತಿಕ ಚರ್ಯೆ ಮತ್ತು ಅಸ್ಮಿತೆ

**ಪ್ರಮುಖ ಪದಗಳು: ಸಂಸ್ಕೃತಿ, ಸಮಾಜ, ಕಲೆ, ಜಾನಪದ, ಸಾಮಾಜೀಕರಣ, ಅಸ್ಮಿತೆ, ಡುರ್ಖೈಮ್, ಮಾರ್ಕ್ಸ್**

# ಪೀಠಿಕೆ

## ಸಂಸ್ಕೃತಿಯ ವ್ಯಾಖ್ಯಾನ

ಪೀಠಿಕೆಯ ಅಧ್ಯಾಯ (ನೋಡಿ ಪು.೨) ದಲ್ಲಿ ಒಂದು ನಿರ್ದಿಷ್ಟ ಸಮಾಜದಲ್ಲಿ ಕಂಡುಬರುವ ಸಂಪೂರ್ಣ ಜೀವನ ವಿಧಾನವಾಗಿ ಸಂಸ್ಕೃತಿಯನ್ನು ವ್ಯಾಖ್ಯಾನಿಸಲಾಗಿದೆ. ಸಂಸ್ಕೃತಿಯು ಸಮಾಜವೊಂದರ ಸದಸ್ಯರು ಕಲಿತು ಪರಸ್ಪರ ಹಂಚಿಕೊಂಡಿರುವಂತದ್ದು ಎನ್ನುವುದನ್ನು ಇಲ್ಲಿ ಸೂಚಿಸಲಾಗಿದೆ. ಆದಾಗ್ಯೂ, ಸಂಸ್ಕೃತಿ ಎಂಬ ಪರಿಕಲ್ಪನೆಯು ಸಂಕೀರ್ಣವಾದುದಾಗಿದೆ. ಸಂಸ್ಕೃತಿಯ ಪ್ರಮುಖ ಸಿದ್ಧಾಂತಿ ರೇಮೆಂಡ್ ವಿಲಿಯಮ್ಸ್ (Raymond Williams) ತಮ್ಮ *Keywords (ಕೀ ವರ್ಡ್ಸ್)* (೧೯೭೬) ಕೃತಿಯಲ್ಲಿ 'ಸಂಸ್ಕೃತಿ ಎಂಬ ಪದವು ಇಂಗ್ಲಿಷ್ ಭಾಷೆಯಲ್ಲಿರುವ ಮೂರು-ನಾಲ್ಕು ಬಹು ಸಂಕೀರ್ಣವಾದ ಪದಗಳಲ್ಲಿ ಒಂದಾಗಿದೆ' ಎಂದು ಪ್ರತಿಪಾದಿಸುತ್ತಾರೆ.

ವಾಸ್ತವವಾಗಿ 'ಸಂಸ್ಕೃತಿ' ಎಂಬ ಪದವನ್ನು ದೈನಂದಿನ ಸಂಭಾಷಣೆಗಳಲ್ಲಿ ಹಾಗೂ ಸಮಾಜಶಾಸ್ತ್ರಜ್ಞರಿಂದ ವಿವಿಧ ರೀತಿಯಲ್ಲಿ ಬಳಸಲಾಗಿದೆ. ಇದನ್ನು ಬಳಕೆ ಮಾಡಲಾಗಿರುವ ಎಲ್ಲಾ ವಿಧಾನಗಳು ಪರೋಕ್ಷವಾಗಿ ಅಥವಾ ಸ್ಪಷ್ಟವಾಗಿ ಸಂಸ್ಕೃತಿಯನ್ನು ಪ್ರಕೃತಿಗೆ ವಿರುದ್ಧವಾಗಿ ನಿಲ್ಲಿಸುತ್ತವೆ. ಮನುಷ್ಯನಿಂದ ಸೃಷ್ಟಿಯಾಗುವ ಎಲ್ಲ ಸಂಗತಿಗಳು ಅಥವಾ ಅವರು ಮಾಡುವ ಎಲ್ಲಾ ಕೆಲಸಗಳು ಸಾಂಸ್ಕೃತಿಕವಾಗಿರುತ್ತವೆ ಆದರೆ ಮನುಷ್ಯನ ಹಸ್ತಕ್ಷೇಪವಿಲ್ಲದೆ ಅಸ್ತಿತ್ವದಲ್ಲಿರುವ ಅಥವಾ ಸಂಭವಿಸುವ ಸಂಗತಿಗಳು ನೈಸರ್ಗಿಕ ಜಗತ್ತಿನ ಭಾಗವಾಗಿರುತ್ತವೆ. ಕ್ರಿಸ್ಟೋಫರ್ ಜೆಂಕ್ಸ್ (Christopher Jencks) (೧೯೯೩) ಅವನು ಸಂಸ್ಕೃತಿಯನ್ನು 'ಸಾಂಕೇತಿಕವಾದದ್ದೆಲ್ಲವೂ: ಮಾನವ ಸಮಾಜದ ಕಲಿತ ಅಂಶಗಳು' ಎನ್ನುವ ಅರ್ಥದಲ್ಲಿ ವಿವರಿಸುತ್ತಾನೆ. ಆದಾಗ್ಯೂ, ಮಾನವ ಬದುಕಿನ ಯಾವ ಅಂಶಗಳು ಮತ್ತು ಅದರ ಸೃಷ್ಟಿಗಳನ್ನು ಸಂಸ್ಕೃತಿಯ ಭಾಗವನ್ನಾಗಿ ನೋಡಬೇಕು ಎನ್ನುವುದರ ಬಗ್ಗೆ ವಿಭಿನ್ನ ವ್ಯಾಖ್ಯಾನಗಳಿವೆ.

ಜೆಂಕ್ಸ್ ಈಗ ಬಳಸಲಾಗುತ್ತಿರುವ 'ಸಂಸ್ಕೃತಿ' ಎಂಬ ಪದವನ್ನು ನಾಲ್ಕು ಮುಖ್ಯವಾದ ಅರ್ಥಗಳಲ್ಲಿ ಪ್ರತ್ಯೇಕಿಸುತ್ತಾನೆ:

1. ಕೆಲವೊಮ್ಮೆ ಸಂಸ್ಕೃತಿಯನ್ನು ಮನಸ್ಥಿತಿಯನ್ನಾಗಿ ಪರಿಗಣಿಸಲಾಗುತ್ತದೆ. ಯಾರು 'ಒಂದು ಪರಿಪೂರ್ಣತೆಯ ಕಲ್ಪನೆ, ವ್ಯಕ್ತಿಸಹಜವಾದ ಮಾನವ ಸಾಧನೆ ಅಥವಾ ವಿಮೋಚನೆಯ ಅಕಾಂಕ್ಷೆಯ ಅಥವಾ ಒಂದು ಗುರಿಯ ಕಡೆಗೆ ಚಲಿಸುತ್ತಿದ್ದಾರೋ,' ಅವರನ್ನು ಸುಸಂಸ್ಕೃತರೆಂದು ಪರಿಗಣಿಸಲಾಗುತ್ತದೆ. ಈ ದೃಷ್ಟಿಕೋನದಲ್ಲಿ ಸಂಸ್ಕೃತಿಯನ್ನು ಒಬ್ಬ ವ್ಯಕ್ತಿಯು ಜ್ಞಾನವನ್ನು ಗಳಿಸಲು ಮತ್ತು ಒಬ್ಬ ಸುಸಂಸ್ಕೃತ ಮನುಷ್ಯನಲ್ಲಿ ಇರಬೇಕಾದ ಅಪೇಕ್ಷಣೀಯ ಗುಣಗಳನ್ನು ಹೊಂದಲು ಸಾಮರ್ಥ್ಯವಿರುವ ವ್ಯಕ್ತಿ ಎಂಬುದಾಗಿ ನೋಡಲಾಗಿದೆ.
2. ಮೊದಲ ವ್ಯಾಖ್ಯಾನವು ಏಕಪಕ್ಷೀಯದ ದೃಷ್ಟಿಕೋನದ್ದಾಗಿದೆ, ಅಂದರೆ ಮಾನವನ ಕೆಲವು ಅಂಶಗಳು ಬೇರೆ ಅಂಶಗಳಿಗಿಂತ ಶ್ರೇಷ್ಠವೆಂದು ಪರಿಗಣಿಸುವ ದೃಷ್ಟಿಕೋನವಾಗಿದೆ. ಎರಡನೆಯ ವ್ಯಾಖ್ಯಾನವು ಸಹ ಏಕಪಕ್ಷೀಯದ ವ್ಯಾಖ್ಯಾನವೆ ಆಗಿದೆ, ಆದರೆ ಇದು ಕೆಲವು

**Commented [k1]:** I have used this term to mean an onesided view so that it connectes to the next sentence and makes sense as ganya which is the right translation for elite does not give the right meaning. Perhaps partial and singular could also be used.

ವ್ಯಕ್ತಿಗಳನ್ನು ಉತ್ತಮರು ಎಂದು ಹೇಳುವುದುರ ಬದಲು ಕೆಲವು ಸಮಾಜಗಳು ಇತರ ಸಮಾಜಗಳಿಗಿಂತ ಶ್ರೇಷ್ಠ ಎಂದು ಇದು ಪರಿಗಣಿಸುತ್ತದೆ. ಈ ಅರ್ಥದಲ್ಲಿ ಹೇಳುವುದಾದರೆ, ಸಂಸ್ಕೃತಿಯು ನಾಗರಿಕತೆಗೆ ನಿಕಟ ಸಂಬಂಧವನ್ನು ಹೊಂದಿದೆ. ಕೆಲವು ಸಮಾಜಗಳು ಇತರೆ ಸಮಾಜಗಳಿಗಿಂತ ಹೆಚ್ಚು ಸುಸಂಸ್ಕೃತ ಮತ್ತು ನಾಗರಿಕ ಎಂದು ಪರಿಗಣಿಸುತ್ತದೆ. ಸಂಸ್ಕೃತಿಯ ಈ ದೃಷ್ಟಿಕೋನವು ಪಾಶ್ಚಿಮಾತ್ಯ ಸಮಾಜಗಳು ಇತರ ಸಮಾಜಗಳಿಗಿಂತ ಹೆಚ್ಚು ವಿಕಾಸಗೊಂಡಿವೆ ಎನ್ನುವ ಹರ್ಬರ್ಟ್ ಸ್ಪೆನ್ಸರ್ (Herbert Spencer) (ನೋಡಿ ಪು.146) ನಂತಹ ವಿಕಾಸವಾದಿ ಚಿಂತನೆಗಳೊಂದಿಗೆ ತಳುಕು ಹಾಕಿಕೊಂಡಿದೆ.

೩. ಮೂರನೆಯ ವ್ಯಾಖ್ಯಾನದ ಪ್ರಕಾರ ಸಂಸ್ಕೃತಿ ಎಂಬುದು 'ಯಾವುದೇ ಒಂದು ಸಮಾಜದೊಳಗಿನ ಸಾಮೂಹಿಕ ಕಲೆಗಳು ಮತ್ತು ಬೌದ್ಧಿಕ ಕಾರ್ಯವಾಗಿರುತ್ತದೆ'. ಜೆಂಕ್ಸ್ ಸೂಚಿಸುವಂತೆ, ಇದೊಂದು ಸಾಮಾನ್ಯ ಜ್ಞಾನದ ವ್ಯಾಖ್ಯಾನವಾಗಿದ್ದು ವ್ಯಾಪಕವಾಗಿ ಇದನ್ನು ಬಳಸಲಾಗುತ್ತಿದೆ. ಈ ಅಭಿಪ್ರಾಯದ ಪ್ರಕಾರ ಸಂಸ್ಕೃತಿಯನ್ನು ಮಾನವನ ಸಾಮಾಜಿಕ ಜೀವನದ ಎಲ್ಲಾ ಅಂಶಗಳಲ್ಲಿ ಕಾಣುವುದರ ಬದಲಾಗಿ ಚಿತ್ರಮಂದಿರ, ಸಂಗೀತ ಕಛೇರಿ ಸಭಾಂಗಣ, ಕಲಾಮಂದಿರ ಮತ್ತು ಗ್ರಂಥಾಲಯಗಳಲ್ಲಿ ಕಾಣಬಹುದಾಗಿದೆ. ಈ ಅರ್ಥದಲ್ಲಿ ಕೆಲವು ವೇಳೆ ಸಂಸ್ಕೃತಿಯನ್ನು **ಶ್ರೇಷ್ಠ ಸಂಸ್ಕೃತಿ (high culture)** ಎಂದು ಕರೆಯಲಾಗುತ್ತದೆ.

4. ಅಂತಿಮ ವ್ಯಾಖ್ಯಾನವು ಸಂಸ್ಕೃತಿಯನ್ನು 'ಒಂದು ಜನರ ಸಂಪೂರ್ಣ ಜೀವನ ರೀತಿ' ಎಂದು ನೋಡುತ್ತದೆ. ಸಂಸ್ಕೃತಿಯ ಈ ವ್ಯಾಖ್ಯಾನವನ್ನು ರಾಲ್ಫ್ ಲಿಂಟನ್ (**Ralph Linton**) (1945) ಅಳವಡಿಸಿಕೊಂಡಿದ್ದು, ಅವರ ಪ್ರಕಾರ: 'ಒಂದು ಸಮಾಜದ ಸಂಸ್ಕೃತಿಯು ಅದರ ಸದಸ್ಯರ ಜೀವನ ವಿಧಾನವಾಗಿದೆ; ಅಂದರೆ ಅವರು ಸಂಗ್ರಹಿಸಿದ ವಿಚಾರಗಳು ಮತ್ತು ಕಲಿತ (ಸಮಾಜದ) ರೀತಿಗಳೆಲ್ಲವನ್ನು ತಲೆತಲೆಮಾರುಗಳೊಂದಿಗೆ ಹಂಚಿಕೊಂಡು ದಾಟಿಸುವುದಾಗಿದೆ.'

ಈ ನಾಲ್ಕನೆಯ ವ್ಯಾಖ್ಯಾನವನ್ನೇ ಸಾಮಾನ್ಯವಾಗಿ ಸಮಕಾಲೀನ ಸಮಾಜಶಾಸ್ತ್ರಜ್ಞರು ಅಳವಡಿಸಿಕೊಳ್ಳುತ್ತಾರೆ. ಈ ಅರ್ಥದಲ್ಲಿ ಸಂಸ್ಕೃತಿಯು ಸಮಾಜಶಾಸ್ತ್ರದ ಸಂಪೂರ್ಣ ವಿಷಯವಸ್ತುವನ್ನು ಬಹುತೇಕ ಒಳಗೊಳ್ಳುತ್ತದೆ. ಹಾಗಾಗಿ ಸಂಸ್ಕೃತಿಯ ಸಮಾಜಶಾಸ್ತ್ರವನ್ನು ಸಮಾಜಶಾಸ್ತ್ರದ ಇತರೆ ಕ್ಷೇತ್ರಗಳಿಗಿಂತ ಭಿನ್ನವೆಂದು ನೋಡಲು ಕಷ್ಟವಾಗುತ್ತದೆ. ಮೂರನೇ ವ್ಯಾಖ್ಯಾನವನ್ನು ಅಳವಡಿಸಿಕೊಂಡರೆ ಸಂಸ್ಕೃತಿಯ ಸಮಾಜಶಾಸ್ತ್ರ ಎಂದು ಕರೆಸಿಕೊಳ್ಳುವ ಸಮಾಜಶಾಸ್ತ್ರದ ವಿಶಿಷ್ಟ ಕ್ಷೇತ್ರವನ್ನು ಗುರುತಿಸುವುದು ಸುಲಭವಾಗುತ್ತದೆ. ಉದಾಹರಣೆಗೆ, ಕಲೆಯ ಸಮಾಜಶಾಸ್ತ್ರ, ಸಂಗೀತದ ಸಮಾಜಶಾಸ್ತ್ರ, ಸಾಹಿತ್ಯದ ಸಮಾಜಶಾಸ್ತ್ರ ಇವುಗಳನ್ನು ಇದು ಒಳಗೊಂಡಿರುತ್ತದೆ.

## ಸಂಸ್ಕೃತಿಯ ವಿಧಗಳು

ಸಮಾಜಶಾಸ್ತ್ರಜ್ಞರು ಗುರುತಿಸಿರುವ ಸಂಸ್ಕೃತಿಯ ವಿವಿಧ ವಿಧಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸುವ ಮೂಲಕ ಸಂಸ್ಕೃತಿಯ ಈ ವ್ಯಾಖ್ಯಾನಗಳನ್ನು (ನಿರ್ದಿಷ್ಟವಾಗಿ ೩ ಮತ್ತು 4ನೇ ವ್ಯಾಖ್ಯಾನಗಳು) ಮತ್ತಷ್ಟು ಅಭಿವೃದ್ಧಿಪಡಿಸಬಹುದಾಗಿದೆ.

### ಶ್ರೇಷ್ಠ ಸಂಸ್ಕೃತಿ

ಮೇಲೆ ತಿಳಿಸಿದಂತೆ, **ಶ್ರೇಷ್ಠ ಸಂಸ್ಕೃತಿ (high culture)** ಎಂಬ ಪದವನ್ನು ಸಾಮಾನ್ಯವಾಗಿ ವಿಶೇಷವಾಗಿ ಶ್ರೇಷ್ಠ ಸ್ಥಾನವನ್ನು ಹೊಂದಿರುವ ಸಾಂಸ್ಕೃತಿಕ ಸೃಷ್ಟಿಗಳಿಗೆ ಬಳಸಲಾಗುತ್ತದೆ. ಸಂಸ್ಕೃತಿಯ ಅಭಿರುಚಿಯ ನಿರ್ಣಯಕಾರರ ಪ್ರಕಾರ ಅವುಗಳೆಲ್ಲ ಮಾನವ ಸೃಜನಶೀಲತೆಯ ಅತ್ಯುನ್ನತ ಸಾಕಾರರೂಪವಾಗಿದೆ. ಸುದೀರ್ಘ ಚರಿತ್ರೆಯುಳ್ಳ ಕಲಾಪ್ರಕಾರಗಳನ್ನು ಸಾಮಾನ್ಯವಾಗಿ ಶ್ರೇಷ್ಠ ಸಂಸ್ಕೃತಿಯ ಉದಾಹರಣೆಗಳನ್ನಾಗಿ ಪರಿಗಣಿಸಲಾಗುತದೆ. ಇವು ಗೀತನಾಟಕಗಳು (opera), ಜನರ ಮೆಚ್ಚುಗೆ ಗಳಿಸಿದ ಶಾಸ್ತ್ರೀಯ ಸಂಗೀತ ಸಂಯೋಜಕರಾದ ಬೀಟೋವನ್ **(Beethoven)** ಮತ್ತು ಮೊಟ್ಜಾರ್ಟ್ **(Mozart)** ರಂತಹವರ ಕೃತಿಗಳು, ಖ್ಯಾತ ಕಲಾವಿದ ಲಿಯೊನಾರ್ಡೊ ಡ ವಿನ್ಸಿ **(Leonardo da Vinci)** ಯಿಂತಹವರ ಚಿತ್ರಕಲೆಗಳು, ಹಾಗೂ ಶೇಕ್ಸ್‌ಪಿಯರ್ **(Shakespeare)** ಮತ್ತು ಮಿಲ್ಟನ್ **(Milton)** ರಂತಹವರ ವಿಮರ್ಶಾತ್ಮಕ ಮೆಚ್ಚುಗೆ ಪಡೆದ ಸಾಹಿತ್ಯಗಳನ್ನು ಒಳಗೊಂಡಿದೆ. ಈ ಪದವನ್ನು ಬಳಸುವ ಹಲವರಿಗೆ ಶ್ರೇಷ್ಠ ಸಂಸ್ಕೃತಿ ಎನ್ನುವುದು ಕಲಾತ್ಮಕವಾಗಿ ನಾವು ಮುಂದೆ ಪರಿಗಣಿಸಲಾಗುವಂತಹ ಮೂರು ಹೆಚ್ಚು ಶ್ರೇಷ್ಠವಲ್ಲದ ಸಂಸ್ಕೃತಿಯ ರೂಪಗಳಿಗಿಂತ ಉನ್ನತವಾದದ್ದು.

### ಜಾನಪದ ಸಂಸ್ಕೃತಿ

ಸಾಮಾನ್ಯ ಜನರ ಸಂಸ್ಕೃತಿಯೇ **ಜಾನಪದ ಸಂಸ್ಕೃತಿ(folk culture)** ಎನಿಸಿಕೊಳ್ಳುತ್ತದೆ, ವಿಶೇಷ ಕೈಗಾರಿಕಾ–ಪೂರ್ವದ ಸಮಾಜದಲ್ಲಿಯ ಜನರ ಸಂಸ್ಕೃತಿಯನ್ನು ಇದು ಸೂಚಿಸುತ್ತದೆ. ಡಾಮಿನಿಕ್ ಸ್ಟ್ರಿನಾಟಿ (Dominic Strinati) (೧೯೯೫) ಯ ಪ್ರಕಾರ ಸಾಮಾನ್ಯವಾಗಿ ಜಾನಪದ ಸಂಸ್ಕೃತಿಯು 'ತಳಮಟ್ಟದಿಂದ ಹುಟ್ಟಿ, ಸ್ವಯಂ ಸೃಷ್ಟಿಯಾಗಿ ಮತ್ತು ಸ್ವಾಯತ್ತತೆಯನ್ನು ಹೊಂದಿದ್ದು ಅದು ಜನರ ಜೀವನ ಮತ್ತು ಅನುಭವಗಳನ್ನು ನೇರವಾಗಿ ಪ್ರತಿಬಿಂಬಿಸುವಂಥವುಗಳು'. ತಲೆಮಾರಿನಿಂದ ತಲೆಮಾರಿಗೆ ದಾಟಿಸಿದಂತ ಸಾಂಪ್ರದಾಯಿಕ ಜಾನಪದ ಗೀತೆಗಳು ಹಾಗೂ ಸಾಂಪ್ರದಾಯಿಕ ಕಥೆಗಳು ಜಾನಪದ ಸಂಸ್ಕೃತಿಯ ಉದಾಹರಣೆಗಳಾಗಿವೆ. ಜಾನಪದ ಸಂಸ್ಕೃತಿಯು ಶ್ರೇಷ್ಠ ಸಂಸ್ಕೃತಿಯಷ್ಟು ಮೌಲ್ಯಯುತವಾಗಿಲ್ಲದಿದ್ದರೂ ಅವುಗಳಲ್ಲೂ ಕೆಲವು ಮಹತ್ವವಾದ ಅಂಶಗಳಿವೆ ಎಂಬುದಾಗಿ ಕೆಲವು ಸಿದ್ಧಾಂತಿಗಳು ಹೇಳಿದ್ದಾರೆ. ಸ್ಟ್ರಿನಾಟಿಯು ಈ ಅಭಿಪ್ರಾಯವನ್ನು ಕೆಳಗಿನಂತೆ

ವಿವರಿಸುತ್ತಾನೆ: 'ಜಾನಪದ ಸಂಸ್ಕೃತಿಯು ಕಲೆಯಾಗಲು ಸಾಧ್ಯವೇ ಇಲ್ಲ, ಆದರೆ ಅದರ ವಿಶಿಷ್ಟತೆಯನ್ನು ಒಪ್ಪಿಕೊಳ್ಳಲಾಗಿದೆ ಹಾಗೂ ಗೌರವಿಸಲಾಗಿದೆ'. ಕನಿಷ್ಟ ಪಕ್ಷ ಇದೊಂದು ನೈಜ ಸಂಸ್ಕೃತಿಯಾಗಿದ್ದು ಯಾವುದೇ ಬಗೆಯ ಕೃತಕ ಸೃಷ್ಟಿಯಾಗಿರುವುದಿಲ್ಲ.

**ಸಮೂಹ ಸಂಸ್ಕೃತಿ**

ವಿಮರ್ಶಕರ ಪ್ರಕಾರ **ಸಮೂಹ ಸಂಸ್ಕೃತಿಯು (mass culture)** ಜನಪದ ಸಂಸ್ಕೃತಿಗಿಂತ ಕೆಳಮಟ್ಟದ್ದು. ಜಾನಪದ ಸಂಸ್ಕೃತಿಯನ್ನು ಆಧುನಿಕ ಪೂರ್ವ ಮತ್ತು ಕೈಗಾರಿಕಾ-ಪೂರ್ವ ಸಮಾಜಗಳ ಲಕ್ಷಣವೆಂದು ಪರಿಗಣಿಸಿದರೆ, ಸಮೂಹ ಸಂಸ್ಕೃತಿಯು ಕೈಗಾರಿಕಾ ಸಮಾಗಳ ಸೃಷ್ಟಿ ಎಂದು ನೋಡಲಾಗಿದೆ. ಸಮೂಹ ಸಂಸ್ಕೃತಿ ಎಂಬುದು ಮೂಲಭೂತವಾಗಿ ಸಮೂಹ ಮಾಧ್ಯಮದ ಸೃಷ್ಟಿಯಾಗಿದೆ. ಜನಪ್ರಿಯ ಚಲನಚಿತ್ರಗಳು, ದೂರದರ್ಶನ ಧಾರಾವಾಹಿಗಳು ಮತ್ತು ಪಾಪ್ (ಜನಪ್ರಿಯ) ಸಂಗೀತಗಳು ಇದಕ್ಕೆ ಉದಾಹರಣೆಗಳಾಗಿವೆ. ಮುಂದೆ ನಾವು ನೋಡುವಂತೆ ಕೆಲವು ಸಮೂಕ ಸಂಸ್ಕೃತಿಯ ಟೀಕಾಕಾರರ ಪ್ರಕಾರ ಅದು ವ್ಯಕ್ತಿಯ ಚಾರಿತ್ರ್ಯವನ್ನು ಕೆಡಿಸಿದರೆ ಸಮಾಜಕ್ಕೆ ವಿನಾಶಕಾರಿಯಾದುದಾಗಿದೆ. ಜಾನಪದ ಸಂಸ್ಕೃತಿಯು ಸಾಮಾನ್ಯ ಜನರ ಸೃಷ್ಟಿಯಾದರೆ ಸಮೂಹ ಸಂಸ್ಕೃತಿಯು ಅವರ ಅನುಭೋಗದ ವಸ್ತುವಾಗುತ್ತದೆ. ಈ ದೃಷ್ಟಿಕೋನದ ಪ್ರಕಾರ ಜನರು ಸ್ವಂತ ಅಲೋಚನೆ ಮಾಡಲು ಅಸಮರ್ಥರಾಗಿರುವ ಸಮೂಹ ಸಮಾಜದ ನಿಷ್ಕ್ರಿಯ ಸದಸ್ಯರಾಗುತ್ತಾರೆ.

**ಜನಪ್ರಿಯ ಸಂಸ್ಕೃತಿ**

ಅನೇಕ ವೇಳೆ **ಜನಪ್ರಿಯ ಸಂಸ್ಕೃತಿ (pop culture)** ಎಂಬ ಪದವನ್ನು ಸಮೂಹ ಸಂಸ್ಕೃತಿ ಎಂಬ ಪದವನ್ನು ಬಳಸುವ ರೀತಿಯಲ್ಲೇ ಬಳಸಲಾಗುತ್ತದೆ. ಜನಪ್ರಿಯ ಸಂಸ್ಕೃತಿಯು ಸಾಂಸ್ಕೃತಿಕ ಪರಿಣಿತರೆಂಬ ಆಡಂಬರ ತೋರದ ಅಸಂಖ್ಯಾತ ಸಾಮಾನ್ಯ ಜನರಿಂದ ಮೆಚ್ಚುಗೆ ಪಡೆಯುವ ಎಲ್ಲಾ ಸಾಂಸ್ಕೃತಿಕ ಸೃಷ್ಟಿಗಳನ್ನು ಒಳಗೊಳ್ಳುತ್ತದೆ: ಉದಾಹರಣೆಗೆ, ದೂರದರ್ಶನದ ಕಾರ್ಯಕ್ರಮಗಳು, ಪಾಪ್ ಸಂಗೀತ, ಮಾರುಕಟ್ಟೆಯ ದೃಷ್ಟಿಯಿಂದ ಮತ್ತು ಸಾಮಾನ್ಯ ಜನರ ಅನುಭೋಗಕ್ಕೆಂದೇ ತಯಾರಿಸಲಾದ *'ಸ್ಟಾರ್ ವಾರ್ಸ್'* ಅಂತಹ ಚಲನಚಿತ್ರಗಳು ಅಥವಾ *'ಹ್ಯಾರಿ ಪಾಟರ್'* ಅಂತಹ ಧಾರಾವಾಹಿ ಸರಣಿಗಳು, ಮತ್ತು ಪತ್ತೇದಾರಿ ಕಥೆಗಳ ಕಲ್ಪಿತ ಕಥನಸಾಹಿತ್ಯಗಳು. ಆದಾಗ್ಯೂ, ಸಮೂಹ ಸಂಸ್ಕೃತಿಯನ್ನು ಸಾಮಾನ್ಯವಾಗಿ ತುಚ್ಛಾರ್ಥವಾಗಿ – ನಿಂದನೆಯ ಪದವಾಗಿ – ಬಳಸಲ್ಪಡುತ್ತಾದರೂ ಜನಪ್ರಿಯ ಸಂಸ್ಕೃತಿಯನ್ನು ಆ ರೀತಿಯಲ್ಲಿ ಬಳಸಲಾಗುವುದಿಲ್ಲ. ಕೆಲವರು ಜನಪ್ರಿಯ ಸಂಸ್ಕೃತಿಯನ್ನು ಲಘುವಾದ ಅಥವಾ ಕೆಲವೊಮ್ಮೆ ಹಾನಿಕರವಾಗಿರುವ ಸಂಸ್ಕೃತಿಯಾಗಿ ಕಂಡರೆ ಮತ್ತೆ ಕೆಲವರು, ಆಧುನಿಕೋತ್ತರವಾದ ಸಿದ್ಧಾಂತಿಗಳನ್ನೂ ಒಳಗೊಂಡಂತೆ, ಇದು ಶ್ರೇಷ್ಠ ಸಂಸ್ಕೃತಿಯಷ್ಟೇ ಸ್ವೀಕಾರಾರ್ಹತೆಯಿರುವ ಮತ್ತು ಅಷ್ಟೇ ಮೌಲ್ಯಯುತವಾದ ಸಂಸ್ಕೃತಿ ಎಂದು ವಾದಿಸಿದ್ದಾರೆ.

**ಉಪಸಂಸ್ಕೃತಿ**

**ಉಪಸಂಸ್ಕೃತಿ (subcultures)** ಎಂಬ ಪದವು 'ಒಂದು ಜನಸಮುದಾಯದಲ್ಲಿ ಇತರೆ ಸಾಮಾಜಿಕ ಗುಂಪುಗಳಿಗಿಂತ ಗಮನಾರ್ಹ ರೀತಿಯಲ್ಲಿ ತಮ್ಮನ್ನು ಪ್ರತ್ಯೇಕಿಸುವಂತಹ ಪರಸ್ಪರ ಸಾಮಾನ್ಯವಾಗಿರುವ ಅಂಶಗಳನ್ನು ಹೊಂದಿರುವ (ಅಂದರೆ ಸಮಸ್ಯೆ, ಆಸಕ್ತಿ ಹಾಗೂ ಆಚರಣೆಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದರೆ) ಜನರ ಗುಂಪುಗಳನ್ನು' ಸೂಚಿಸುವುದಕ್ಕಾಗಿ ಸಮಾಜಶಾಸ್ತ್ರದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ (Thornton (ಥಾರ್ಟನ್),೧೯೯೭). ಜೀವನ ಶೈಲಿಯನ್ನು ಹಂಚಿಕೊಂಡು ಸಹಬಾಳ್ವೆಯಿಂದ ವಾಸಿಸುತ್ತಿರುವ ಸಮುದಾಯಗಳನ್ನೂ ಒಳಗೊಂಡಂತೆ, ಸಾಮಾನ್ಯವಾದ ಸಂಗೀತ ಅಭಿರುಚಿಯನ್ನು ಹೊಂದಿರುವ ಮತ್ತು ಬಿಡುವಿನ ಸಮಯದಲ್ಲಿ ಒಂದೇ ರೀತಿಯಾದ ಮನರಂಜನೆಯನ್ನು ಪಡೆಯುವ ಯುವಕರ ಗುಂಪುಗಳು (ಉದಾಹರಣೆಗೆ: ravers (ರೇವರ್ಸ್) - ಸ್ವೇಚ್ಛಾಚಾರಿ), ಜನಾಂಗೀಯ ಗುಂಪುಗಳು, ಒಂದೇ ಧಾರ್ಮಿಕ ನಂಬಿಕೆಗಳನ್ನು ಹಂಚಿಕೊಳ್ಳುವ ಜನರು, ಒಂದೇ ಗುಂಪಿ(gang)ನ ಸದಸ್ಯರು ಇತ್ಯಾದಿ ವೈವಿಧ್ಯಮಯ ಗುಂಪುಗಳಿಗೆ ಈ ಪದವನ್ನು ಅಳವಡಿಸಲಾಗಿದೆ. ಕೆಲವು ಸಿದ್ಧಾಂತಿಗಳು, ವಿಶೇಷವಾಗಿ ಕಾರ್ಯಾತ್ಮಕವಾದಿಗಳು, ಒಂದು ಸಮಾಜದ ಸದಸ್ಯರು ಎಷ್ಟರ ಮಟ್ಟಿಗೆ ಸಂಸ್ಕೃತಿಯನ್ನು, ಅಂದರೆ ಜೀವನಶೈಲಿ ಎಂಬರ್ಥದಲ್ಲಿ, ಹಂಚಿಕೊಂಡಿದ್ದಾರೆ ಎನ್ನುವುದರ ಮೇಲೆ ಒತ್ತು ನೀಡಿದ್ದಾರೆ. ಅನೇಕ ಇತರೆ ಸಿದ್ಧಾಂತಿಗಳು ಸಮಾಜದಲ್ಲಿರುವ ಸಾಂಸ್ಕೃತಿಕ ಬಹುತ್ವ ಅಥವಾ ವೈವಿಧ್ಯಮಯ ಉಪಸಂಸ್ಕೃತಿಯಲ್ಲಿನ ಒಂದು ಅಥವಾ ಹೆಚ್ಚಿನ ಅಂಶಗಳಿಗೆ ಒತ್ತು ನೀಡುತ್ತಾರೆ.

**ಜಾಗತಿಕ ಸಂಸ್ಕೃತಿ**

ಪ್ರಮಾಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ **ಜಾಗತಿಕ ಸಂಸ್ಕೃತಿ (global culture)** ಪರಿಕಲ್ಪನೆಯು ಉಪಸಂಸ್ಕೃತಿ ಕಲ್ಪನೆಗೆ ತೀವ್ರ ವಿರುದ್ಧವಾಗಿದೆ. ಜಾಗತಿಕ ಸಂಸ್ಕೃತಿಯ ಕಲ್ಪನೆಯು ನಾವೆಲ್ಲರೂ ಜಗತ್ತಿನ ಎಲ್ಲ ಭಾಗಗಳ ಮೇಲೂ ಪರಿಣಾಮ ಬೀರುತ್ತಿರುವ, ಎಲ್ಲವನ್ನೂ ಒಳಗೊಳ್ಳುವ ಏಕರೂಪದ ಸಂಸ್ಕೃತಿಯ ಭಾಗವಾಗುತ್ತಿದ್ದೇವೆ ಎಂದು ಸೂಚಿಸುತ್ತದೆ. ಇಂತಹ ವ್ಯಾಖ್ಯಾನದ ಅರ್ಥದಲ್ಲಿ ಯಾವುದೇ ಜಾಗತಿಕ ಸಂಸ್ಕೃತಿ ಇಲ್ಲ ಎಂದು ಮೈಕ್ ಫೆದರ್‌ಸ್ಟೋನ್ (Mike Featherstone) ವಾದಿಸುತ್ತಾನೆ. ಅವನು ಹೇಳುವಂತೆ, 'ಜಾಗತಿಕ ಸಂಸ್ಕೃತಿ ಇದೆಯೇ? ಒಂದು ವೇಳೆ ನಾವು ಜಾಗತಿಕ ಸಂಸ್ಕೃತಿಯನ್ನು ರಾಷ್ಟ್ರ-ಪ್ರಭುತ್ವ ಸಂಸ್ಕೃತಿಯ ವಿರಾಟ್ ಸ್ವರೂಪಕ್ಕೆ ಸಮಾನವೆಂದು ವ್ಯಾಖ್ಯಾನಿಸಿದರೆ ಸ್ಪಷ್ಟವಾಗಿ ಈ ಪ್ರಶ್ನೆಗೆ ಉತ್ತರ ನೇತ್ಯಾತ್ಮಕವಾಗಿರುತ್ತದೆ (೧೯೯೦,ಪು.೧).

ಪ್ರಪಂಚಾದ್ಯಂತ ಜನರು ಒಂದೇ ರೀತಿಯ ಜೀವನಶೈಲಿಯನ್ನು ಹಂಚಿಕೊಂಡಿಲ್ಲ ಎನ್ನುವುದು ಸ್ಪಷ್ಟವಾಗಿದೆ ಎಂದು ಫೆದರ್‌ಸ್ಟೋನ್ ನಂಬುತ್ತಾರೆ. ಆದಾಗ್ಯೂ, ಸಂಸ್ಕೃತಿಯ ಕೆಲವು ಅಂಶಗಳು ಪ್ರಭುತ್ವದ ಗಡಿಗಳನ್ನು ದಾಟಿ ಮತ್ತು ಜಗತ್ತಿನ ಹಲವಾರು ಪ್ರದೇಶಗಳಿಗೆ ವ್ಯಾಪಕವಾಗಿ ಪ್ರಸರಿಸುವ ಒಂದು ಪ್ರಕ್ರಿಯೆಯಾಗಿ *'ಸಂಸ್ಕೃತಿಯ ಜಾಗತೀಕರಣ'ದ ಬಗ್ಗೆ* ಮಾತನಾಡುವುದು ವಿವೇಚನಾಯುಕ್ತವಾದುದು ಎನ್ನುವ ನಂಬಿಕೆ ಹೊಂದಿದ್ದಾರೆ.

**ಸಾಮಾಜೀಕರಣ**

ಆಂಥೊನಿ ಗಿಡೆನ್ಸ್ (Anthony Giddens) ಸಾಮಾಜೀಕರಣವನ್ನು ‘ಒಂದು ಅಸಹಾಯಕ ಶಿಶುವು ಕ್ರಮೇಣವಾಗಿ ಅವನು ಅಥವಾ ಅವಳು ಜನಿಸಿದ ಸಂಸ್ಕೃತಿಯ ರೀತಿನೀತಿಗಳಲ್ಲಿ ಕೌಶಲವನ್ನು ಹೊಂದಿ ತನ್ನರಿವನ್ನು ಪಡೆದ ತಿಳುವಳಿಕೆಯುಳ್ಳ ವ್ಯಕ್ತಿಯಾಗಿ ಆಗುವ ಪ್ರಕ್ರಿಯೆ’ ಎಂದು ವ್ಯಾಖ್ಯಾನಿಸುತ್ತಾನೆ (Giddens (ಗಿಡೆನ್ಸ್), ೨೦೦೬, ಪು. ೧೬೩). ಅವನು ಮುಂದುವರೆದು, ‘ಯುವಜನರಲ್ಲಿ ಸಾಮಾಜೀಕರಣವು ಸಾಮಾಜಿಕ ಮರುಸೃಷ್ಟಿಯ ಸಾಮಾನ್ಯವಾದ ವಿದ್ಯಮಾನಕ್ಕೆ ಎಡೆ ಮಾಡಿಕೊಡುತ್ತದೆ – ಅಂದರೆ ಸಮಾಜಗಳು ಕಾಲಾನಂತರದಲ್ಲಿ ರಾಚನಿಕ (structural) ನಿರಂತರತೆಯನ್ನು ಹೊಂದಿರುವ ಪ್ರಕ್ರಿಯೆ, ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ(ಪು. ೧೬೩). ಆದ್ದರಿಂದ, ಇತರೆ ಅನೇಕ ಸಾಮಾಜಶಾಸ್ತ್ರಜ್ಞರಂತೆ ಗಿಡೆನ್ಸ್‌ರವರು, ಸಾಮಾಜೀಕರಣವನ್ನು ಸಮಾಜಗಳ ಒಂದು ಮೂಲಭೂತ ಪ್ರಕ್ರಿಯೆಯಾಗಿ, ಮತ್ತು ಅವರ ಸಂಸ್ಕೃತಿಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವುದರಿಂದ ಅವುಗಳು ಮುಂದುವರೆದುಕೊಂಡು ಹೋಗುವಂತೆ ಮಾಡುವ ಸಾಧನಗಳಲ್ಲಿ ಪ್ರಮುಖವಾದದೊಂದು ಎಂಬಂತೆ ನೋಡುತ್ತಾನೆ.

ಹರೆಯದ ಮಕ್ಕಳು ಸಾಮಾಜಿಕವಾಗಿ ವರ್ತಿಸುವ ಸಾಮರ್ಥ್ಯವನ್ನು ಪಡೆಯುವ ಸಾಮಾಜೀಕರಣದ ಆರಂಭಿಕ ಹಂತಗಳನ್ನು **ಪ್ರಾಥಮಿಕ ಸಾಮಾಜೀಕರಣ (primary socialization) ವೆಂದು ಕರೆಯಲಾಗುತ್ತದೆ.** ಬಹಳಷ್ಟು ಪ್ರಾಥಮಿಕ ಸಾಮಾಜೀಕರಣವು ಕುಟುಂಬದೊಳಗೆ ನಡೆಯುವಂತದ್ದು. ಪ್ರಾಥಮಿಕ ಸಾಮಾಜೀಕರಣವು ಮಾನವನನ್ನು ರೂಪಿಸಲು ಸಹಾಯಮಾಡುವ ಅತ್ಯಂತ ಮುಖ್ಯವಾದ ಪ್ರಕ್ರಿಯೆ ಎಂದು ಪರಿಗಣಿಸಲಾಗುತ್ತದೆ, ಆದರೆ ಸಾಮಾಜೀಕರಣವು ಮಾನವನ ಜೀವನದುದ್ದಕ್ಕೂ ನಡೆಯುತ್ತದೆ.

**ದ್ವಿತೀಯ ಸಾಮಾಜೀಕರಣ (Secondary socialization)** ವು ನಂತರದಲ್ಲಿ ನಡೆಯುತ್ತದೆ. ಶಿಕ್ಷಣದ, ರಿಲಿಜನ್ ಮತ್ತು ಸಮೂಹ ಮಾಧ್ಯಮಗಳು ದ್ವಿತೀಯ ಸಾಮಾಜೀಕರಣದ ಅತಿ ಮುಖ್ಯ ಸಾಧನಗಳಾಗಿರುತ್ತವೆ. ಸಮಾನಸ್ಕಂಧರ ಗುಂಪುಗಳು ಸಹ ಮುಖ್ಯವಾದವು. **ಸಮಾನಸ್ಕಂಧರ ಗುಂಪು (peer group)** ಗಳೆಂದರೆ ಸಮಾನ ಸ್ಥಿತಿಯ ಜನರ ಗುಂಪು– ಉದಾಹರಣೆಗೆ ಗೆಳೆಯರ, ಒಂದೇ ವರ್ಗದಲ್ಲಿ ಓದುತ್ತಿರುವ ಶಾಲಾ ಮಕ್ಕಳ, ಅಥವಾ ಒಂದೇ ಉದ್ಯೋಗದಲ್ಲಿರುವ ಸಹೋದ್ಯೋಗಿಗಳ, ಗುಂಪುಗಳು. ವಯಸ್ಕರಿಂದಾಗುವ ಮಕ್ಕಳ ಸಾಮಾಜೀಕರಣವು ಸಮಾನಸ್ಕಂಧರ ಗುಂಪುಗಳಲ್ಲಿ ಆಗುವ ಸಾಮಾಜೀಕರಣದ ಪಕ್ರಿಯೆಗಿಂತ ಹೆಚ್ಚು ಶ್ರೇಣೀಕೃತವಾಗಿರುತ್ತದೆ. **ಸಮಾನ**ಸ್ಕಂಧರ ಗುಂಪುಗಳಲ್ಲಿ ಸಂಸ್ಕೃತಿ ಮತ್ತು ನಡವಳಿಕೆಯ ನಿಯಮಗಳು ಪರಸ್ಪರಕ್ರಿಯೆಯ ಸಂದರ್ಭಗಳಲ್ಲಿ ಅಭಿವೃದ್ಧಿಗೊಳ್ಳುತ್ತವೆಯೇ ಹೊರತು ಅವುಗಳನ್ನು ಮೇಲಿನಿಂದ ಹೇರಲಾಗುವುದಿಲ್ಲ. ವಯಸ್ಕರು ಹೊಸ ಸನ್ನಿವೇಶಗಳನ್ನು ಅನುಭವಿಸುತ್ತಿದ್ದಂತೆ – ಉದಾಹರಣೆಗೆ, ಮನೆ ಸ್ಥಳಾಂತರದ ಕಾರಣ, ಉದ್ಯೋಗಗಳಲ್ಲಿ ಬದಲಾವಣೆ ಅಥವಾ ಕಾಲಕಳೆಯುವ ಹೊಸ ರೀತಿಗಳು – ಅವರು ಆ ಸಾಮಾಜಿಕ ಗುಂಪಿನ ನಿಯಮಗಳನ್ನು, ಮೌಲ್ಯಗಳನ್ನು ಮತ್ತು ಸಾಮಾಜಿಕ ಪಾತ್ರಗಳನ್ನು ಕಲಿಯುತ್ತಾ ಹೋದಂತೆ ಸಾಮಾಜೀಕರಣವು

**Commented [k2]:** To note : religion is maintained instead of dharma and an explanation to be included

ಸಂಭವಿಸುತ್ತದೆ. ಇದಲ್ಲದೆ, ಸಮಾಜದ ಸಂಸ್ಕೃತಿಯು ಬದಲಾಗುತ್ತಲೇ ಇರುವುದರಿಂದ ಸಾಮಾಜೀಕರಣದ ಪ್ರಕ್ರಿಯೆಯು ನಿರಂತರವಾಗಿರುತ್ತದೆ.

ಸಾಮಾಜೀಕರಣದ ಈ ಸಂಕ್ಷಿಪ್ತ ವಿವರಣೆಯು, ಇದೊಂದು ಪೀಳಿಗೆಯಿಂದ ಪೀಳಿಗೆಗೆ ಸಮಾನವಾದ ಮತ್ತು ಹೆಚ್ಚು ಕಡಮೆ ಸ್ಥಿರವಾದ ಸಂಸ್ಕೃತಿಯನ್ನು ದಾಟಿಸಿಕೊಂಡು ಬರುವುದರಿಂದ ಯಥಾಸ್ಥಿತಿಯನ್ನು ಕಪಾಡಿಕೊಂಡು ಬರುವಂತಹ ಹೆಚ್ಚು ನಿರೀಕ್ಷಿಸಬಹುದಾದ ಸಂಪ್ರದಾಯಬದ್ಧ ಪ್ರಕ್ರಿಯೆ ಎನ್ನುವುದನ್ನು ಸೂಚಿಸುತ್ತದೆ. ಕಾರ್ಯಾತ್ಮಕವಾದಗಳಂತಹ ಕೆಲವು ಸಾಮಾಜೀಕರಣದ ಸಮಾಜಶಾಸ್ತ್ರೀಯ ವಿವರಣೆಗಳು ಆ ಪ್ರಕ್ರಿಯೆಯನ್ನು ಹೀಗೆ ನೋಡುತ್ತವೆ. ಆದರೆ, ನಾವು ಮುಂದೆ ನೋಡುವಂತೆ ಈ ಅರ್ಥ ವಿವರಣೆಯು ಅನೇಕ ಟೀಕೆಗಳಿಗೆ ಒಳಪಟ್ಟಿದೆ (ನೋಡಿ ಪು.೬೮೭–೯೨).

ಅನೇಕ ಸಾಮಾಜಿಕ ಮನೋವಿಜ್ಞಾನಿಗಳು ಮತ್ತು ಸಮಾಜಶಾಸ್ತ್ರಜ್ಞರು ಮಕ್ಕಳು (ಮತ್ತು ವಯಸ್ಕರೂ ಕೂಡ) ಸಾಮಾಜೀಕರಣವನ್ನು ಕೇವಲ ನಿಷ್ಕ್ರಿಯವಾಗಿ ಸ್ವೀಕರಿಸುತ್ತಿರುವುದಿಲ್ಲ, ಬದಲಿಗೆ ಸಕ್ರಿಯವಾಗಿ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುತ್ತಾರೆ ಎಂಬುದನ್ನು ಒತ್ತಿ ಹೇಳುತ್ತಾರೆ. ಸಾಮಾಜೀಕರಣವು ಕೆಲವು ಸಮಯದಲ್ಲಿ ನಿರೀಕ್ಷಿತ ರೀತಿಯಲ್ಲಿ ಹಾಗೂ ಸರಾಗವಾಗಿ ಕೆಲಸ ಮಾಡುವುದಿಲ್ಲ. ಜನರು ಸಾಮಾನ್ಯವಾಗಿ ವಿವಿಧ ರೀತಿಯಾದ ನಡವಳಿಕೆಗಳನ್ನು ಪ್ರೋತ್ಸಾಹಿಸುವ ವೈರುಧ್ಯಮಯವಾದ ಸಾಮಾಜೀಕರಣದ ಪ್ರಭಾವಗಳಿಗೆ ಒಳಗಾಗುತ್ತಾರೆ. ಅಲ್ಲದೆ ಜನರು ತಮಗೆ ಕಲಿಸುವುದನ್ನು ತಿರಸ್ಕರಿಸುವುದರ ಮೂಲಕ ಸಾಮಾಜೀಕರಣಕ್ಕೆ ಸಕ್ರಿಯ ಪ್ರತಿರೋಧವನ್ನು ತೋರಿಸುವ ಸಾಧ್ಯತೆಯೂ ಇದೆ. ಯುವಜನಾಂಗವು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿರುತ್ತಾರೆ ಮತ್ತು ಆದ್ದರಿಂದ ತಮ್ಮ ಹಿಂದಿನ ಪೀಳಿಗೆಯು ಹೇಳಿಕೊಟ್ಟಿದ ಹಾಗೆ ಅವರು ಕಲಿಯುತ್ತಿರುವುದಿಲ್ಲ ಎಂದು ಕೆಲವು ಬರಹಗಾರರು ಸೂಚಿಸುತ್ತಾರೆ (ನೋಡಿ ಪು.೬೮೯). ಹಿರಿಯ ವಯಸ್ಸಿನ ಗುಂಪುಗಳ ಕುರಿತು ಹೇಳುವುದಾದರೆ ಈ ಬಗೆಯ ಸಕ್ರಿಯ ಪ್ರತಿರೋಧವು **ಅಪವರ್ತನಾ ಉಪಸಂಸ್ಕೃತಿಗಳ (deviant subcultures)** ರಚನೆಯಲ್ಲಿ ಅಭಿವ್ಯಕ್ತಗೊಳ್ಳಬಹುದು (ನೋಡಿ ಪು.೩೨೫–೭ ಮತ್ತು ಪು.೭೭೧–೮೨).

ಸಾಮಾಜೀಕರಣವು ಮಕ್ಕಳ ಬೆಳವಣಿಗೆಯಲ್ಲಿ ಪ್ರಮುಖ ಭಾಗವಾದರೂ ಅವರ ಬೆಳವಣಿಗೆಯಲ್ಲಿ ಇತರೆ ಪ್ರಕ್ರಿಯೆಗಳು ಸಹ ಇರುತ್ತವೆ. ಈ ಪ್ರಕ್ರಿಯೆಲ್ಲಿ **ವ್ಯಕ್ತಿಯಾಗುವಿಕೆಯು (individuation)** ಒಂದು - 'ಒಬ್ಬ ವ್ಯಕ್ತಿಯಾಗಿ ಮಾರ್ಪಡುವ ಪ್ರಕ್ರಿಯೆ' – ಎಂದು ಜೆರಾಲ್ಡ್ ಹ್ಯಾಂಡೆಲ್ (Gerald Handel) (2006) ಅವರು ವಾದಿಸುತ್ತಾರೆ. ಮಕ್ಕಳು ತಮ್ಮನ್ನು ಸಮಾಜದ ಇತರೆ ಸದಸ್ಯರಿಂದ ಪ್ರತ್ಯೇಕಿಸುವ ಗುಣಲಕ್ಷಣಗಳನ್ನು ಹೊಂದಿರುವ ಅನನ್ಯ ವ್ಯಕ್ತಿಗಳಾಗಿ ಗ್ರಹಿಸಲು ಕಲಿಯುತ್ತಾರೆ. ಜನರು ತಮ್ಮ ಪೋಷಕರ ನಕಲು ಪ್ರತಿಗಳಲ್ಲ ಅಥವಾ ಸಮಾಜದ ಎಲ್ಲಾ ಸದಸ್ಯರು ಒಂದೇ ತೆರನಾದ ವ್ಯಕ್ತಿಗಳಾಗಿರುವುದಿಲ್ಲ. ಹೀಗೆ ವ್ಯಕ್ತಿಯಾಗುವಿಕೆಯು **ಅಸ್ಮಿತೆ (identity)** ಎಂಬ ಮತ್ತೊಂದು ಪ್ರಮುಖವಾದ ಸಮಾಜಶಾಸ್ತ್ರದ ಪರಿಕಲ್ಪನೆಯನ್ನು ಹುಟ್ಟುಹಾಕುತ್ತದೆ. (ಸಾಮಾಜೀಕರಣದ ಹೆಚ್ಚು ವಿವರವಾದ ಚರ್ಚೆಗಾಗಿ ನೋಡಿ ಪು.೬೮೬–೯೨.)

# ಅಸ್ಮಿತೆ

## ಅಸ್ಮಿತೆಯ ವ್ಯಾಖ್ಯಾನ

**ಅಸ್ಮಿತೆ (identity)** ಎಂಬ ಪರಿಕಲ್ಪನೆಯನ್ನು 'ಪೋಷಕರಿಂದ ಮತ್ತು ಕುಟುಂಬದಿಂದ ತನ್ನನ್ನು ಭಿನ್ನವಾಗಿ ಗುರುತಿಸಿಕೊಳ್ಳುತ್ತಾ ಹೋಗುವ ಮಗುವಿನಲ್ಲಿ ತನ್ನತನದ ಅರಿವು ಅಭಿವೃದ್ಧಿಗೊಳ್ಳುತ್ತದೆ' ಎಂದು ವ್ಯಾಖ್ಯಾನಿಸಲಾಗಿದೆ (Jary and Jary (ಜೇರಿ ಮತ್ತು ಜೇರಿ), 1991). ನಾನು ಯಾರು, ನನ್ನಲ್ಲಿರುವ ಅತ್ಯಂತ ಪ್ರಮುಖ ಅಂಶವಾವುದು ಎನ್ನುವುದರ ಬಗ್ಗೆ ಒಬ್ಬರಿಗಿರುವ ಅರಿವನ್ನು ಅದು ಸೂಚಿಸುತ್ತದೆ. ರಾಷ್ಟ್ರೀಯತೆ, ಜನಾಂಗೀಯತೆ, ಲೈಂಗಿಕತೆ (ಸಲಿಂಗದ, ಭಿನ್ನ ಲಿಂಗದ, ಉಭಯಲಿಂಗದ), ಲಿಂಗತ್ವ ಮತ್ತು ವರ್ಗ ಇವುಗಳು ಅಸ್ಮಿತೆಯ ಪ್ರಮುಖ ಮೂಲಗಳಾಗಿವೆ. ವ್ಯಕ್ತಿಗಳು ಅಸ್ಮಿತೆಗಳನ್ನು ಹೊಂದಿರುವುದು ನಿಜವಾದರೂ, ಅಸ್ಮಿತೆಯು ವ್ಯಕ್ತಿಗಳು ಯಾವ ಗುಂಪಿಗೆ ಸೇರಿರುತ್ತಾರೊ ಮತ್ತು ಯಾವ ಗುಂಪಿನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೊ ಅಂತಹ ಸಾಮಾಜಿಕ ಗುಂಪುಗಳಿಗೆ ಸಂಬಂಧ ಹೊಂದಿರುತ್ತದೆ. ಆದಾಗ್ಯೂ, ವ್ಯಕ್ತಿಯೊಬ್ಬನು ತನ್ನನ್ನು ತಾನು ಗ್ರಹಿಸವ ರೀತಿ ಮತ್ತು ಬೇರೆಯವರು ಅವನನ್ನು ನೋಡುವ ರೀತಿ ಇವೆರಡರ ನಡುವೆ ಯಾವಾಗಲೂ ಹೊಂದಾಣಿಕೆ ಇರುವುದಿಲ್ಲ. **ವೈಯಕ್ತಿಕ ಅಸ್ಮಿತೆ (Personal identity)** ಎಂಬುದು **ಸಾಮಾಜಿಕ ಅಸ್ಮಿತೆ (social identity)**ಗಿಂತ ಭಿನ್ನವಾಗಿರಬಹುದು. ಉದಾಹರಣೆಗೆ, ವ್ಯಕ್ತಿಯೊಬ್ಬನನ್ನು ಇತರರು ಪುರುಷನೆಂದು ಗ್ರಹಿಸಬಹುದು ಆದರೆ ಆ ವ್ಯಕ್ತಿಯು ತಾನು ಪುರುಷನ ದೇಹದೊಳಗೆ ಹುದುಗಿರುವ ಸ್ತ್ರೀ ಎಂದು ಗ್ರಹಿಸಬಹುದು.

## ಅಸ್ಮಿತೆಯ ಮಹತ್ವ

ಸಮಾಜಶಾಸ್ತ್ರದಲ್ಲಿ ಅಸ್ಮಿತೆಯ ಪರಿಕಲ್ಪನೆಯು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಪರಿಕಲ್ಪನೆಯು ಆರಂಭದ ಸಮಾಜಶಾಸ್ತ್ರಜ್ಞರಲ್ಲಿ ವಿರಳವಾಗಿ ಬಳಕೆಯಲ್ಲಿದ್ದರೂ ಅನೇಕವೇಳೆ ಅವರ ಕೃತಿಗಳಲ್ಲಿ ಅಸ್ಮಿತೆಯ ಸಿದ್ಧಾಂತದ ಇಂಗಿತವಿತ್ತು. ಉದಾಹರಣೆಗೆ, ಬ್ರಿಟನ್ನಿನಲ್ಲಿ ಸಾಮಾಜಿಕ ವರ್ಗಗಳ ಬಗೆಗಿನ ಹೆಚ್ಚಿನ ಆರಂಭಿಕ ಅಧ್ಯಯನಗಳು ವರ್ಗದ ಅಸ್ಮಿತೆಯು ಜನರ ಅಸ್ಮಿತೆಯ ಅರಿವಿಗೆ ಮುಖ್ಯವೆಂದು ನೋಡುವ ಪ್ರವೃತ್ತಿಯನ್ನು ಹೊಂದಿದ್ದವು. ಅನೇಕವೇಳೆ ವರ್ಗ ಪ್ರಜ್ಞೆಯ ಅಧ್ಯಯನಗಳು (ನೋಡಿ, ಉದಾಹರಣೆಗೆ, ಪು. 56–8) ವರ್ಗ ಅಸ್ಮಿತೆಯು ಬಲವಾಗಿರುತ್ತದೆ ಎಂಬ ಗೃಹೀತವನ್ನು ಹೊಂದಿದ್ದವು. ಇತರೆ ಅಸ್ಮಿತೆಗಳಾದ ಲಿಂಗತ್ವ, ಲೈಂಗಿಕತೆ ಮತ್ತು ಜನಾಂಗೀಯತೆಗಳಿಗೆ ಅಷ್ಟೇನೂ ಮಹತ್ವವನ್ನು ನೀಡಲಿಲ್ಲ. ಕೆಲವು ಸಮಾಜಶಾಸ್ತ್ರಜ್ಞರು ಇಂತಹ ಅಧ್ಯಯನಗಳು ಅಸ್ಮಿತೆಯ ಆಧುನಿಕ ಪರಿಕಲ್ಪನೆಗಳನ್ನು ಅಳವಡಿಸಿಕೊಂಡಿದ್ದವು ಎಂದು ನಂಬುತ್ತಾರೆ. ಜನರ ಅಸ್ಮಿತೆಯು ಸಾಕಷ್ಟು ಸ್ಥಿರವಾದ, ಸಾಮಾಜಿಕ ಗುಂಪುಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾದ, ಮತ್ತು ವರ್ಗ ಮತ್ತು ರಾಷ್ಟ್ರೀಯತೆಗಳಂತಹ ಒಂದು ಅಥವಾ ಎರಡು ಬದಲಾಗುವ ಸಾಧ್ಯತೆಯುಳ್ಳ ಮುಖ್ಯ ಅಂಶಗಳನ್ನು ಆಧರಿಸಿದೆ ಎಂದು ಭಾವಿಸಲಾಗಿತ್ತು.

ಬಹಳ ಇತ್ತೀಚಿಗೆ ರಾಚನಿಕೋತ್ತರ ಮತ್ತು ಆಧುನಿಕೋತ್ತರ ಅಸ್ಮಿತೆಯ ಸಿದ್ಧಾಂತಗಳು ವಿಭಿನ್ನ ರೀತಿಯ ದೃಷ್ಟಿಕೋನಗಳನ್ನು ಅಳವಡಿಸಿಕೊಂಡಿವೆ (ನೋಡಿ ಪು.೬೯೭–೯). ಅವು ಜನರ ಅಸ್ಮಿತೆಗಳು ಅನೇಕ ಭಿನ್ನ ಆಯಾಮಗಳನ್ನು ಹೊಂದಿದ್ದು, ಅವುಗಳು ಆಗಾಗ್ಗೆ ಬದಲಾಗುತ್ತವೆ ಮತ್ತು ಗಣನೀಯ ವೈರುಧ್ಯಗಳನ್ನು ಹೊಂದಿರುತ್ತವೆ ಎಂದು ಸೂಚಿಸುವ ಪ್ರವೃತ್ತಿಯನ್ನು ಹೊಂದಿದೆ. ಉದಾಹರಣೆಗೆ, ಕೆಲವು ಸಂದರ್ಭಗಳಲ್ಲಿ ಜನರು ಹೆಚ್ಚು 'ಪುರುಷ' ರಂತೆ ವರ್ತಿಸುತ್ತಾರೆ ಹಾಗೂ ಇತರೆ ಸಂದರ್ಭಗಳಲ್ಲಿ 'ಸ್ತ್ರೀ' ಯರಂತೆ ವರ್ತಿಸುವ ಸಾಧ್ಯತೆ ಇದೆ. ಇದಲ್ಲದೆ, 'ಪುರುಷತ್ವ' ಮತ್ತು 'ಸ್ತ್ರೀತ್ವ'ದ ಅಸ್ಮಿತೆಗಳ ಅರ್ಥವು ಹೆಚ್ಚು ಅಸ್ಪಷ್ಟವಾಗಿವೆ. ಈಗ ಗಂಡಸು ಅಥವಾ ಹೆಂಗಸಿನಂತೆ ಇರಲು ಹಲವು ವಿಭಿನ್ನ ಮಾರ್ಗಗಳಿವೆ, ಕೇವಲ ಒಂದಲ್ಲ (ನೋಡಿ, ಉದಾಹರಣೆಗೆ, ಪು. ೬೯೦–೨).

ಈ ರೀತಿಯ ದೃಷ್ಟಿಕೋನಗಳ ಪ್ರಕಾರ, ಜನರು ಸಕ್ರಿಯವಾಗಿ ತಮ್ಮ ಅಸ್ಮಿತೆಗಳನ್ನು ರೂಪಿಸಿಕೊಳ್ಳುತ್ತಾರೆ. ಅಸ್ಮಿತೆಗಳನ್ನು ಜನರು ಸೇರಿರುವ ಸಾಮಾಜಿಕ ಗುಂಪುಗಳಿಗೆ ಸೀಮಿತಗೊಳಿಸುವುದು ಇನ್ನು ಸಾಧ್ಯವಿಲ್ಲ. ಯಾವ ಸಾಮಾಜಿಕ ಗುಂಪುಗಳಿಗೆ ಸೇರಬೇಕು ಎನ್ನುವುದರ ಕುರಿತು ಜನರಿಗೆ ಸಾಕಷ್ಟು ಆಯ್ಕೆಗಳಿವೆ ಮತ್ತು ಅಂಗಡಿಗಳನ್ನು ಸುತ್ತಿ ಸಾಮಾನುಗಳನ್ನು ಖರೀದಿಸುವುದರ ಮೂಲಕ ಮತ್ತು ಇತರ ಅನುಭೋಗಗಳ ಮೂಲಕ ಅವರು ತಮ್ಮ ಅಸ್ಮಿತೆಗಳನ್ನು ರೂಪಿಸಬಹುದು ಮತ್ತು ಕೆಲವೊಮ್ಮೆ ಬದಲಾಯಿಸಲುಬಹುದು. ಕೆಲವು ಬರಹಗಾರರ ಪ್ರಕಾರ ಸಮಕಾಲೀನ ಸಮಾಜಗಳಲ್ಲಿನ ಬಹಳಷ್ಟು ವ್ಯಕ್ತಿಗಳು ಯಾವುದೇ ರೀತಿಯ ಸ್ಥಿರವಾದ ಅಸ್ಮಿತೆಗಳನ್ನು ಹೊಂದಿರುವುದಿಲ್ಲ – ಅವರ ಅಸ್ಮಿತೆಗಳು ಛಿನ್ನಭಿನ್ನವಾಗಿವೆ (ನೋಡಿ ಪು. ೭೦೦–೪).

**ಅಸ್ಮಿತೆ ಮತ್ತು ಸಂಸ್ಕೃತಿ**

ಅಸ್ಮಿತೆಯ ಪರಿಕಲ್ಪನೆಯು ಸಂಸ್ಕೃತಿಯ ಕಲ್ಪನೆಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಜನರು ಸೇರಿರುವ ಅಥವಾ ಅವರು ಭಾಗವಹಿಸುವ ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಮೂಲಕ ಅಸ್ಮಿತೆಯು ರೂಪಗೊಳ್ಳಬಹುದು. ಆದಾಗ್ಯೂ, ಸಂಸ್ಕೃತಿ ಮತ್ತು ಅಸ್ಮಿತೆಯ ನಡುವಿನ ಸಂಬಂಧವನ್ನು ವಿಭಿನ್ನ ಅಸ್ಮಿತೆಯ ಸಿದ್ಧಾಂತಗಳು ವಿಭಿನ್ನ ರೀತಿಗಳಲ್ಲಿ ನೋಡುತ್ತವೆ. ಸಂಸ್ಕೃತಿ ಮತ್ತು ಅಸ್ಮಿತೆಯ ಕುರಿತಾದ ಆಧುನಿಕ ಸಿದ್ಧಾಂತಗಳಿಂದ ಪ್ರಭಾವಿತರಾದವರು ಅಸ್ಮಿತೆಯನ್ನು ನಿರ್ದಿಷ್ಟ ಸಂಸ್ಕೃತಿಗಳು ಮತ್ತು ಉಪಸಂಸ್ಕೃತಿಗಳಲ್ಲಿ ಒಳಗೊಳ್ಳುವುದರಿಂದ ಹೆಚ್ಚುಕಡಮೆ ನೇರವಾದ ರೀತಿಯಲ್ಲಿ ಹುಟ್ಟಿಕೊಂಡಿದೆ ಎಂದು ನೋಡುವ ಸಾಧ್ಯತೆ ಇದೆ. ಉದಾಹರಣೆಗೆ, ಬ್ರಿಟನ್ನಿನಲ್ಲಿ ನೆಲೆಸಿರುವ ಜನರು ಒಂದು ಗಟ್ಟಿಯಾದ ಬ್ರಿಟಿಷ್ ಅಸ್ಮಿತೆಯನ್ನು ಹೊಂದಿರುತ್ತಾರೆ ಎಂದು ನಿರೀಕ್ಷಿಸಲಾಗುತ್ತದೆ. ಆಧುನಿಕೋತ್ತರವಾದದಿಂದ ಪ್ರಭಾವಿತವಾದ ಸಿದ್ಧಾಂತಗಳು ಬ್ರಿಟಿಷ್ ಅಸ್ಮಿತೆಯ ಸಂಕೀರ್ಣತೆ ಮತ್ತು ಉದಾಹರಣೆಗೆ, ವಿಭಿನ್ನ ಜನಾಂಗೀಯ ಅಥವಾ ರಾಷ್ಟ್ರೀಯ ಮೂಲಗಳನ್ನು ಹೊಂದಿರುವ ಬ್ರಿಟಿಷ್ ಜನರು ಬ್ರಿಟಿಷ್ ಅಸ್ಮಿತೆಯನ್ನು ಹೇಗೆ ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸುತ್ತಾರೆ ಎನ್ನುವುದಕ್ಕೆ ಪ್ರಾಮುಖ್ಯತೆ ನೀಡುತ್ತದೆ.

ಸ್ಟೀಫನ್ ಫ್ರಾಶ್ (Stephen Frosh) ಅಸ್ಮಿತೆಯು ಸಂಸ್ಕೃತಿಯಿಂದ ಪಡೆದುಕೊಳ್ಳುತ್ತಾದರೂ ಕೇವಲ ಅದರಿಂದ ರೂಪಿತವಾಗುವುದಿಲ್ಲ ಎಂಬ ದೃಷ್ಟಿಕೋನವನ್ನು ವಿವರಿಸುತ್ತಾನೆ:

> ವ್ಯಕ್ತಿಯ 'ಅಸ್ಮಿತೆ'ಯು ವಾಸ್ತವದಲ್ಲಿ ನಾನಾರೀತಿಯದ್ದಾಗಿರುತ್ತವೆ ಮತ್ತು ಸಂಭಾವ್ಯವಾಗಿ ಅನಿಶ್ಚಿತವಾಗಿರುತ್ತವೆ, ಅವು ಅನುಭವಗಳಿಂದ ರಚಿತವಾಗಿ ಭಾಷೆಯ ಸಂಕೇತಗಳ ಮೂಲಕ ವ್ಯಕ್ತಗೊಳ್ಳುತ್ತವೆ ಎಂದು ಇತ್ತೀಚಿನ ಸಮಾಜಶಾಸ್ತ್ರೀಯ ಮತ್ತು ಮನೋವಿಜ್ಞಾನಶಾಸ್ತ್ರೀಯ ಸಿದ್ಧಾಂತಗಳು ಒತ್ತಿ ಹೇಳುತ್ತವೆ. ತಮ್ಮ ಅಸ್ಮಿತೆಗಳನ್ನು ಬೆಳೆಸಿಕೊಳ್ಳುವಲ್ಲಿ ಜನರು ನೇರವಾಗಿ ತಮ್ಮ ಸಾಮಾಜಿಕ ಜಾಲಗಳು ಮತ್ತು ಒಟ್ಟಾರೆ ಸಮಾಜದಲ್ಲಿ ತಮಗೆ ಲಭ್ಯವಿರುವ ಸಾಂಸ್ಕೃತಿಕ ಸಂಪನ್ಮೂಲಗಳನ್ನು ಅವಲಂಬಿಸುತ್ತಾರೆ. ಆದ್ದರಿಂದ, ಅಸ್ಮಿತೆಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯು ಅದರ ಸುತ್ತಮುತ್ತಲಿನ ಸಮಾಜೊ-ಸಾಂಸ್ಕೃತಿಕ ಪರಿಸರದ ವಿರೋಧಾಭಾಸಗಳು ಮತ್ತು ಸ್ವಾಭಾವಿಕ ಪ್ರವೃತ್ತಿಗಳಿಂದ ಗಮನಾರ್ಹವಾಗಿ ಪ್ರಭಾವಿತವಾಗುವಂತದ್ದಾಗಿರುತ್ತವೆ.' ಫ್ರಾಶ್, 1999

ಅಸ್ಮಿತೆಯ ಚರ್ಚಾಂಶವನ್ನು ಕುರಿತು ಕೊನೆಯ ಅಧ್ಯಾಯದಲ್ಲಿ ಹೆಚ್ಚು ಆಳವಾಗಿ ಅಧ್ಯಯನ ಮಾಡಲಾಗುತ್ತದೆ. ಮೊದಲು, ಸಂಸ್ಕೃತಿಯ ಮೇಲಿನ ಹಲವಾರು ದೃಷ್ಟಿಕೋನಗಳನ್ನು ಪರಿಶೀಲಿಸೋಣ.

## ಸಂಸ್ಕೃತಿ – ಕಾರ್ಯಾತ್ಮಕವಾದಿಗಳ ದೃಷ್ಟಿಕೋನಗಳು

ಕಾರ್ಯಾತ್ಮಕವಾದಿ ಸಮಾಜಶಾಸ್ತ್ರಜ್ಞರು ಕಲೆಗಳು ಎನ್ನುವ ಅರ್ಥದಲ್ಲಿ ಸಂಸ್ಕೃತಿಯ ಕುರಿತು ಹೇಳಿರುವುದು ತುಂಬಾ ಕಡಮೆಯೆಂದೇ ಹೇಳಬಹುದು. ಆದರೆ ನಿಯಮಗಳು, ಮೌಲ್ಯಗಳು ಮತ್ತು ಜೀವನ ಶೈಲಿ ಎನ್ನುವ ಅರ್ಥದಲ್ಲಿ ಸಂಸ್ಕೃತಿಯ ಕುರಿತು ಅವರಲ್ಲಿ ಆಸಕ್ತಿ ಇದೆ. ಕಾರ್ಯಾತ್ಮಕವಾದಿಗಳು ಸಾಮಾನ್ಯವಾಗಿ, ವಿಕಾಸವಾದಿ ದೃಷ್ಟಿಕೋನದಿಂದ ಸಾಮಾಜಿಕ ಸಂಸ್ಕೃತಿಯನ್ನು ನೋಡಿದ್ದಾರೆ. ಸಮಾಜವು ವಿಕಾಸಗೊಂಡಂತೆ ಬದಲಾಗುವ ಸಂಸ್ಕೃತಿಯ ಸವರೂಪಕ್ಕೆ ಅವರು ಒತ್ತು ನೀಡಿರುತ್ತಾರೆ. ಡುರ್ಖೈಮ್ ಮತ್ತು ಮಾಸ್ ಅವರು ಮಾನವ ಸಂಸ್ಕೃತಿಯ ಮೂಲಕ್ಕೆ ಹೋಗುವ ಒಂದು ಪ್ರಭಾವಯುತವಾದ ಕಾರ್ಯಾತ್ಮಕ ಸಿದ್ಧಾಂತವನ್ನು ಬೆಳೆಸಿದ್ದಾರೆ.

## ಎಮಿಲ್ ಡುರ್ಖೈಮ್ ಮತ್ತು ಮಾರ್ಸೆಲ್ ಮಾಸ್ – ಪ್ರಾಚೀನ ವರ್ಗೀಕರಣ

### ವರ್ಗೀಕರಣದ ಅಗತ್ಯತೆ

*‘ಪ್ರಿಮಿಟಿವ್ ಕ್ಲಾಸಿಫಿಕೇಷನ್’* (*Primitive Classification*) (1963, ಮೊದಲ ಪ್ರಕಟಣೆ 1903) ಎನ್ನುವ ಕೃತಿಯಲ್ಲಿ ಎಮಿಲ್ ಡುರ್ಖೈಮ್ (Emile Durkheim) ಮತ್ತು ಮಾರ್ಸೆಲ್ ಮಾಸ್ (Marcel Mauss) ಅವರು ಮಾನವನ ಸಂಸ್ಕೃತಿಯು ಹೇಗೆ ಉಂಟಾಯಿತು ಎಂಬುದರ ಬಗ್ಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಪರಿಗಣಿಸಿದ್ದಾರೆ. ಡುರ್ಖೈಮ್ ಮತ್ತು ಮಾಸ್ ಅವರ ಪ್ರಕಾರ ಮನುಷ್ಯನು ವಸ್ತುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ಮತ್ತು ಅವುಗಳನ್ನು ವರ್ಗೀಕರಣ ಮಾಡಲು ಸಮರ್ಥರಾದಾಗ ಮಾತ್ರ ಸಂಸ್ಕೃತಿಯು ಸಾಧ್ಯವಾಗುತ್ತದೆ. ಮನುಷ್ಯನು ಹುಟ್ಟಿದಾಗ, ಅವನು ವಸ್ತುಗಳನ್ನು ಕೇವಲ ‘ನಿರಂತರವಾಗಿ ಹರಿಯುವ ಸಂಕೇತಗಳಾಗಿ ಅನುಭವಿಸುತ್ತಾನೆಯೇ ಹೊರತು ಅವುಗಳನ್ನು ವರ್ಗೀಕರಿಸಲು ಸಮರ್ಥನಾಗಿರುವುದಿಲ್ಲ. ಇದು ಒಂದನ್ನು ಮತ್ತೊಂದರಿಂದ ಪ್ರತ್ಯೇಕಿಸುವುದನ್ನು ಕಷ್ಟಸಾಧ್ಯವಾಗಿಸುತ್ತದೆ. ಸಂಸ್ಕೃತಿಯನ್ನು ಬೆಳೆಸಲು ಮನುಷ್ಯರು ವಿಷಯಗಳನ್ನು ವರ್ಗೀಕರಿಸುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಇಂತಹ ವ್ಯವಸ್ಥೆಯನ್ನು ಹೊರತುಪಡಿಸಿ, ಅವರಿಗೆ ತಮ್ಮ ಸುತ್ತಮುತ್ತಲಿನ ಜಗತ್ತನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ.

### ವರ್ಗೀಕರಣ ವ್ಯವಸ್ಥೆಗಳ ಮೂಲ

ವರ್ಗೀಕರಣದ ಆಧಾರವಾಗಿರುವ ಮಾದರಿಯು ಎಲ್ಲಿಂದ ಬರುತ್ತದೆ? ಡುರ್ಖೈಮ್ ಮತ್ತು ಮಾಸ್ ಸಮಾಜದ ರಚನೆಯಿಂದ ಅಂತಹ ಮಾದರಿಯು ಬರುತ್ತದೆ ಎಂದು ಪ್ರತಿಪಾದಿಸಿದರು. ಸಾಮಾಜಿಕ ರಚನೆಗಳು ಸಾಮಾಜಿಕ ಗುಂಪುಗಳ ನಡುವಿನ ವಿಭಜನೆಗಳನ್ನು ಆಧರಿಸಿರುವುದರಿಂದ ಜನರು ಅಂತಹ ವಿಭಜನೆಗಳ ಆಧಾರದ ಮೇಲೆ ಜಗತ್ತನ್ನು ವರ್ಗೀಕರಿಸಲು ಪ್ರಾರಂಭಿಸುತ್ತಾರೆ.

ಡುರ್ಖೈಮ್ ಮತ್ತು ಮಾಸ್ ಅವರು ಆಸ್ಟ್ರೇಲಿಯಾದ ಮೂಲನಿವಾಸಿಗಳು ಅತ್ಯಂತ ಸರಳ ಮತ್ತು ಅತ್ಯಂತ ಪ್ರಾಚೀನವಾದ ಸಮಾಜಗಳನ್ನು ಹೊಂದಿದ್ದರೆಂದು ನಂಬಿದ್ದರು. ಮಾನವ ವರ್ಗೀಕರಣ ವ್ಯವಸ್ಥೆಗಳು ಹೇಗೆ ಬೆಳವಣಿಗೆಯಾಗಿರಬಹುದು ಎಂಬುದಕ್ಕೆ ಇಂತಹ ಸಮಾಜಗಳು ಪ್ರಮುಖ ಸಾಕ್ಷಿಯನ್ನು ಒದಗಿಸುತ್ತವೆ ಎಂದು ಅವರು ನಂಬಿದ್ದರು. ಇತರ ಮಾನವಶಾಸ್ತ್ರಜ್ಞರ ಕೃತಿಗಳನ್ನು ಪರಿಶೀಲಿಸುವ ಮೂಲಕ ಬಹುಶಃ ಪೋರ್ಟ್ ಮೆಕೆ (Port MacKay) ಮೂಲನಿವಾಸಿಗಳ ವರ್ಗೀಕರಣ ವ್ಯವಸ್ಥೆಯು ಇತರ ಎಲ್ಲ ವ್ಯವಸ್ಥೆಗಳಿಗಿಂತ ಅತ್ಯಂತ ಸರಳವಾದುದಾಗಿದೆ ಎಂದು ಡುರ್ಖೈಮ್ ಮತ್ತು ಮಾಸ್ ಅವರು ಕಂಡುಕೊಂಡರು. ಪೋರ್ಟ್ ಮೆಕೆ ಮೂಲನಿವಾಸಿಗಳು **ಎರಡು ಮೊಯಿಟಿಸ್ (moieties -** ಎರಡು ಸಮಾನ ಭಾಗಗಳಲ್ಲಿ ಒಂದು) ಅಥವಾ ಎರಡು ಸಾಮಾಜಿಕ ಗುಂಪುಗಳಾಗಿ ವಿಭಜಿತರಾಗಿದ್ದರು. ಅವುಗಳನ್ನು ಯಂಗರೂ (Youngaroo) ಮತ್ತು ವೂಟರೂ (Wootaroo) ಎಂದು ಕರೆಯಲಾಯಿತು. ತಮ್ಮ ಸಮಾಜವು ಎರಡು ಗುಂಪುಗಳಾಗಿ ವಿಭಜಿತವಾಗಿದ್ದರಿಂದ ತಮ್ಮ

**Commented [k3]:** Transcribed as it is the title and kept the English version in brackets here as the sentence begins with the title of the work

ಮೊಯಿಟಿಸ್‌ಗೆ ಅನುಗುಣವಾಗಿ ಎಲ್ಲವನ್ನೂ ಎರಡು ಭಾಗಗಳನ್ನಾಗಿ ವಿಭಜಿಸಿಕೊಂಡರು. ಉದಾಹರಣೆಗೆ, ಮೊಸಳೆಗಳು ಮತ್ತು ಸೂರ್ಯ ಇವರುಗಳು ಯಂಗರೂಗಳಾದರು ಮತ್ತು ಕಾಂಗರೂಗಳು ಮತ್ತು ಚಂದ್ರ ವೂಟರೂಗಳಾದರು.

ಇತರೆ ಮೂಲನಿವಾಸಿ ಗುಂಪುಗಳು ಹೆಚ್ಚು ಸಂಕೀರ್ಣವಾದ ವ್ಯವಸ್ಥೆಗಳನ್ನು ಹೊಂದಿದ್ದವು. ಉದಾಹರಣೆಗೆ, ಕ್ವೀನ್ಸ್‌ಲ್ಯಾಂಡ್‌ನ ವಕೆಲ್ಬುರಾ (Wakelbura) ಮೂಲನಿವಾಸಿ ಗುಂಪು ತಮ್ಮ ಸುತ್ತಮುತ್ತಲಿರುವ ಎಲ್ಲವನ್ನೂ ನಾಲ್ಕು ಗುಂಪುಗಳಾಗಿ ವರ್ಗೀಕರಿಸಿದವು. ಏಕೆಂದರೆ ಅವರ ಸಮಾಜವು ನಾಲ್ಕು ಗುಂಪುಗಳಾಗಿ ವಿಭಜಿತವಾಗಿತ್ತು: ಎರಡು ಮೊಯಿಟಿಸ್ – ಮಲ್ಲೆರಾ (Mallera) ಮತ್ತು ವುಟರು (Wutaru) – ಇದರಲ್ಲಿ ಪ್ರತಿಯೊಂದು ಎರಡು ವೈವಾಹಿಕ ಕುಲಗಳ ಉಪವಿಭಾಗಗಳಾಗಿ ವಿಭಜಿತವಾಗಿದ್ದವು – ಮಲ್ಲೆರಾ ಮೊಯಿಟಿನಲ್ಲಿ ಕುರ್ಗಿಲ (Kurgila) ಮತ್ತು ಬ್ಯಾನ್ಬಿ (Banbey), ವುಟರು ಮೊಯಿಟಿನಲ್ಲಿ ವೊಂಗು (Wongu) ಮತ್ತು ಒಬು (Obu) ಎಂದು ವಿಭಾಗಗೊಂಡವು. ವಕೆಲ್ಬುರಾ ವರ್ಗೀಕರಣ ವ್ಯವಸ್ಥೆಯು ವಿಷಯಗಳ ಎರಡು ಮೂಲ ವರ್ಗಗಳಾಗಿ, ಅದರಲ್ಲಿನ ಪ್ರತಿಯೊಂದು ಮತ್ತೆರಡು ಉಪವಿಭಾಗಗಳಾಗಿ, ಈ ವಿಭಜನೆಗಳನ್ನು ಪ್ರತಿಬಿಂಬಿಸಿದವು. ಇದಲ್ಲದೆ, ಜನರು ಏನನ್ನು ತಿನ್ನಬೇಕು ಎನ್ನುವುದರ ಮೇಲೂ ಕೂಡ ಇದು ಪರಿಣಾಮ ಬೀರಿತು. ಉದಾಹರಣೆಗೆ, ಬ್ಯಾನ್ಬಿ ಎಂದು ವರ್ಗೀಕರಿಸಿದ ಆಹಾರಗಳನ್ನು ಮಾತ್ರ ಬ್ಯಾನ್ಬಿಯವರು ತಿನ್ನಬಹುದಾಗಿತ್ತು (ಕಾಂಗರೂ, ನಾಯಿಗಳು, ಸಣ್ಣ ಜೇನುನೊಣಗಳು ಮತ್ತು ಜೇನು ಸೇರಿದಂತೆ).

**ಸಂಕೀರ್ಣ ವರ್ಗೀಕರಣ ವ್ಯವಸ್ಥೆಗಳು**

ಸಮಾಜಗಳ ಸಂಕೀರ್ಣತೆ ಹೆಚ್ಚಿದಂತೆ ವರ್ಗೀಕರಣದ ಸಂಕೀರ್ಣತೆಯೂ ಹೆಚ್ಚುತ್ತದೆ. ಉದಾಹರಣೆಗೆ, ಉತ್ತರ ಅಮೆರಿಕಾದ ಝೂನಿ ಸ್ಯೂ (Zuni Sioux) ಬುಡಕಟ್ಟು ಜನಾಂಗದವರು ದಿಕ್ಸೂಚಿಯ ಎಂಟು ಬಿಂದುಗಳನ್ನು ಆಧರಿಸಿದ ಎಂಟು ಪಟ್ಟು ವರ್ಗೀಕರಣ ವ್ಯವಸ್ಥೆಯನ್ನು ಹೊಂದಿರುತ್ತಾರೆ. ಉದಾಹರಣೆಗೆ, 'ನೀರಹಕ್ಕಿ (pelican), ಕೊಕ್ಕರೆ (crane), ಗ್ರೌಸ್ (grouse – ಕೋಳಿಯ ಬಳಗದ ಹಕ್ಕಿ), ಕುರುಚಲು ಕೋಳಿ (sagecock), ನಿತ್ಯಹರಿದ್ವರ್ಣದ ಓಕ್ ಮರ (evergreen oak), ಇತ್ಯಾದಿಗಳು ಉತ್ತರಕ್ಕೆ ಸೇರಿದ ವಸ್ತುಗಳು; ಕರಡಿ, ಕಯೋಟಿ (coyote - ಉತ್ತರ ಅಮೆರಿಕದ ತೋಳ), ಮತ್ತು ಎಳೆ ಹುಲ್ಲುಗಳು ಇವು ದಕ್ಷಿಣಕ್ಕೆ ಸೇರಿದ ವಸ್ತುಗಳಾಗಿದ್ದವು'.

ಇಂತಹ ವರ್ಗೀಕರಣ ವ್ಯವಸ್ಥೆಗಳು ಪ್ರಾಚೀನವೆಂದು ತೋರಿದರೂ, ಎಲ್ಲಾ ವರ್ಗೀಕರಣಕ್ಕೆ ಮತ್ತು ವಾಸ್ತವವಾಗಿ ಎಲ್ಲಾ ಸಂಸ್ಕೃತಿಗೂ ಅವು ಆಧಾರವಾಗಿವೆ. ಹೆಚ್ಚು ಮುಂದುವರಿದ ಮತ್ತು ವೈಜ್ಞಾನಿಕ ವರ್ಗೀಕರಣ ವ್ಯವಸ್ಥೆಗಳಂತೆಯೇ ಅವು ಕೂಡ ಶ್ರೇಣೀಕರಣವನ್ನು ವಿವರಿಸುತ್ತವೆ, ವಿಷಯಗಳ ಗುಂಪುಗಳ ನಡುವೆ ಸಂಬಂಧಗಳನ್ನು ಸ್ಥಾಪಿಸುತ್ತವೆ, ಮತ್ತು ಜನರು ಜಗತ್ತನ್ನು ಗ್ರಹಿಸಲು ಸಾಧ್ಯವಾಗುವಂತೆ ಮಾಡಲು ಅದನ್ನು ಸಂಘಟಿಸುತ್ತವೆ. ಹಾಗಾಗಿ ಎಲ್ಲಾ

ತಿಳುವಳಿಕೆಗಳು ಸಹ ಸಾಮಾಜಿಕ ಸಂಬಂಧಗಳ ಮೇಲೆ ಆಧಾರಿತವಾಗಿರುತ್ತದೆ. ಡುರ್ಖೈಮ್ ಮತ್ತು ಮಾಸ್ ಹೇಳುವಂತೆ:

> ಮನುಷ್ಯರ ಸಾಮಾಜಿಕ ಸಂಬಂಧಗಳು ವಿಷಯಗಳ ನಡುವಿನ ತಾರ್ಕಿಕ ಸಂಬಂಧಗಳ ಮೇಲೆ ಆಧಾರಿತವಾಗಿರುವುದರ ಬದಲು ವಾಸ್ತವದಲ್ಲಿ ತಾರ್ಕಿಕ ಸಂಬಂಧಗಳು ಮಾನವನ ಸಾಮಾಜಿಕ ಸಂಬಂಧಗಳ ಪಡಿಯಚ್ಚುಗಳಾಗಿರುತ್ತವೆ. . . ಮೊದಲ ತಾರ್ಕಿಕ ಪ್ರವರ್ಗಗಳು ಸಾಮಾಜಿಕ ವರ್ಗಗಳಾಗಿದ್ದವು; ವಿಷಯಗಳ ಮೊದಲ ವರ್ಗಗಳು ಮಾನವ ವರ್ಗಗಳಾಗಿದ್ದವು. ಡುರ್ಖೈಮ್ ಮತ್ತು ಮಾಸ್, 1963, ಮೊದಲ ಪ್ರಕಟಣೆ 1903

**ರಿಲಿಜನ್ ಮತ್ತು ವರ್ಗೀಕರಣ**

ಇತರ ಕೃತಿಯಲ್ಲಿಯೂ ಸಹ ಡುರ್ಖೈಮ್ ಸಂಸ್ಕೃತಿಯು ಸಾಮಾಜಿಕ ಮೂಲವನ್ನು ಹೊಂದಿದೆ ಎಂದು ಒತ್ತಿ ಹೇಳುತ್ತಾನೆ. ಅವನ *The Elementary Forms of the Religious Life (ದಿ ಎಲಿಮೆಂಟರಿ ಫಾರ್ಮ್ಸ್ ಆಫ್ ದಿ ರಿಲಿಜಿಯಸ್ ಲೈಫ್)* (1961, ಮೊದಲ ಪ್ರಕಟಣೆ 1912) ಗ್ರಂಥದಲ್ಲಿ ರಿಲಿಜನನ್ನು ಒಳಗೊಳ್ಳುವ ಸಲುವಾಗಿ *'ಪ್ರಿಮಿಟಿವ್ ಕ್ಲಾಸಿಫಿಕೇಷನ್'* ಕೃತಿಯಲ್ಲಿನ ವಾದಗಳನ್ನು ಅದಕ್ಕೆ ಅನ್ವಯಿಸಿದನು. ರಿಲಿಜನ್ ಪವಿತ್ರ ಮತ್ತು ಲೌಕಿಕ ಎಂಬ ಪ್ರಪಂಚದ ಮೂಲಭೂತ ವಿಭಜನೆಯ ಮೇಲೆ ನಿಂತಿದೆ ಎಂದು ಅವನು ವಾದಿಸಿದನು. ಅವನು ಮತ್ತೊಮ್ಮೆ ಆಸ್ಟ್ರೇಲಿಯಾದ ಮೂಲನಿವಾಸಿಗಳ ಉದಾಹರಣೆಯನ್ನು ಉಪಯೋಗಿಸಿಕೊಂಡು ಲಾಂಛನ (totem) ವ್ಯವಸ್ಥೆಯು ಸಮಾಜದ ಪೂಜೆಗೆ ಸಂಬಂಧಿಸಿದೆ ಎನ್ನುವ ವಾದವನ್ನು ಮುಂದಿಟ್ಟನು (ಪೂರ್ಣ ಚರ್ಚೆಗಾಗಿ ನೋಡಿ ಪು. 396–7).

ಸರಳವಾಗಿರುವ ಸಮಾಜಗಳಲ್ಲಿ, ರಿಲಿಜನ್ **ಸಾಮೂಹಿಕ ಪ್ರಜ್ಞೆಗೆ (collective conscience)** – ಸಮಾಜದಲ್ಲಿ ಹಂಚಿಕೊಂಡಿರುವ ನೈತಿಕ ನಂಬಿಕೆಗಳು ಮತ್ತು ಮೌಲ್ಯಗಳು – ಆಧಾರವಾಗಿದೆ ಎಂದು ಡುರ್ಖೈಮ್ ನಂಬಿದ್ದನು. ಡುರ್ಖೈಮ್ 'ಸಂಸ್ಕೃತಿ' ಎಂಬ ಪದವನ್ನು ಸಾಮೂಹಿಕ ಪ್ರಜ್ಞೆಯನ್ನು ಉಲ್ಲೇಖಿಸಲು ಬಳಸದಿದ್ದರೂ ಕೂಡ ಅವನು ವಿವರಿಸುವ ವಿಷಯವು ಕೆಲವು ಇತರ ಬರಹಗಾರರು ಸಂಸ್ಕೃತಿ ಎಂಬ ಪದವನ್ನು ಬಳಸುವ ರೀತಿಯಲ್ಲೇ ಇದೆ. ಡುರ್ಖೈಮ್ (1947) ಹೇಳುವಂತೆ: 'ಒಂದೇ ಸಮಾಜಕ್ಕೆ ಸೇರಿರುವ ಸಾಮಾನ್ಯ ಪ್ರಜೆಗಳ ನಂಬಿಕೆಗಳು ಮತ್ತು ಭಾವನೆಗಳ ಸಮಷ್ಟಿಯು ತನ್ನದೆ ಆದ ಅಸ್ತಿತ್ವವನ್ನು ಹೊಂದಿರುವ ಒಂದು ನಿರ್ಣೀತ (determinate) ವ್ಯವಸ್ಥೆಯನ್ನು ರೂಪಿಸುತ್ತದೆ; ಅದನ್ನು ಸಾಮೂಹಿಕ ಪ್ರಜ್ಞೆ ಎಂದೊ ಅಥವಾ ಸಾಮಾನ್ಯಪ್ರಜ್ಞೆ ಎಂದೊ ಹೇಗೆ ಬೇಕಾದರೂ ಕರೆಯಬಹುದಾಗಿದೆ.

ಅಧ್ಯಾಯ 7ರಲ್ಲಿ ಚರ್ಚಿಸಿದಂತೆ (ನೋಡಿ ಪು.396–7) ಸಾಮೂಹಿಕ ಪ್ರಜ್ಞೆಯು ಕೈಗಾರಿಕಾ–ಪೂರ್ವದ ಸಮಾಜಗಳಲ್ಲಿನ ಜನರ ಮೇಲೆ ಬಲವಾದ ಪ್ರಭಾವವನ್ನು ಬೀರುತ್ತದೆ ಎಂದು ಡುರ್ಖೈಮ್ ನಂಬಿದ್ದನು. ಈ ಸಮಾಜಗಳು **ಯಾಂತ್ರಿಕ ಐಕ್ಯತೆ (mechanical**

**solidarity)ಯ** ಲಕ್ಷಣಗಳನ್ನು ಹೊಂದಿರುತ್ತವೆ. ಜನರು ಪರಸ್ಪರ ಸಮಾನ ಅಂಶಗಳನ್ನು ಹೊಂದಿರುವುದರಿಂದ ಅವರಲ್ಲಿ ಐಕ್ಯತೆಯ ಭಾವ ಮೂಡುತ್ತದೆ. ಅಲ್ಲಿ ಶ್ರಮವಿಭಜನೆ ಇರುವುದು ಬಹಳ ಕಡಮೆ.

ಸಮಾಜವು ವಿಕಾಸನ ಹೊಂದಿದಂತೆ, ಶ್ರಮವಿಭಜನೆಯು ಹೆಚ್ಚು ವಿಶಿಷ್ಟವಾಗುತ್ತಾ ಹೋಗುತ್ತದೆ. ಜನರು ಪರಸ್ಪರ ಒಂದೇ ತರಹದ ಅಂಶಗಳನ್ನು ಹೊಂದಿರುವುದಿಲ್ಲ. ಆದಾಗ್ಯೂ, ಅವರು ಪರಸ್ಪರ ಅವಲಂಬಿತವಾಗಿರುತ್ತಾರೆ. ಉದಾಹರಣೆಗೆ, ಆಹಾರ ಬೆಳೆಯಲು ಶಿಕ್ಷಕರಿಗೆ ರೈತರ ಅಗತ್ಯವಿದೆ, ಮತ್ತು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ರೈತರಿಗೆ ಶಿಕ್ಷಕರ ಅಗತ್ಯವಿದೆ. ಈ ಪರಸ್ಪರ ಅವಲಂಬನೆಯ ಪರಿಸ್ಥಿತಿಯನ್ನು **ಜೈವಿಕ ಐಕ್ಯತೆ (organic solidarity)** ಎಂದು ಡುರ್ಖೈಮ್ ವಿವರಿಸುತ್ತಾನೆ. ಜೈವಿಕ ಐಕ್ಯತೆಯಿರುವ ಸಮಾಜದಲ್ಲಿ ಸಾಮೂಹಿಕ ಪ್ರಜ್ಞೆಯ – ಒಂದು ಸಮಾನಸಂಸ್ಕೃತಿ (shared culture) – ಅಗತ್ಯ ಇನ್ನೂ ಇದೆ. ಆದಾಗ್ಯೂ, ಯಾಂತ್ರಿಕ ಐಕ್ಯತೆಯ ಸಂದರ್ಭಕ್ಕೆ ಹೋಲಿಸಿದರೆ ಸಾಮೂಹಿಕ ಪ್ರಜ್ಞೆಯು ಇಲ್ಲಿ ದುರ್ಬಲವಾಗಿರುತ್ತದೆ. ತಮ್ಮ ವಿಶಿಷ್ಟವಾದ ಪಾತ್ರಗಳನ್ನು ನಿರ್ವಹಿಸಲು ವ್ಯಕ್ತಿಗಳು ವಿಭಿನ್ನವಾಗಿರಬೇಕಾಗುತ್ತದೆ. (ಉದಾಹರಣೆಗೆ, ಜಟ್ಟಿಯೊಬ್ಬ (boxer) ಒಬ್ಬಳು ನರ್ಸ್‌ಗಿಂತ ಹೆಚ್ಚು ಅಕ್ರಮಣಕಾರಿಯಾಗಿರಬೇಕು.)

ವಿಶೇಷ ಶ್ರಮವಿಭಜನೆಯು ವಿಪರೀತವಾದ ವ್ಯಕ್ತಿವಾದವನ್ನು (ಡುರ್ಖೈಮ್ ಇದನ್ನು ಅಹಂಮನ್ಯತೆ **(egoism)** ಎಂದು ಕರೆಯುತ್ತಾನೆ) ಅಥವಾ ಉತ್ತಮ ಆದರ್ಶವಿಲ್ಲದ (normlessness) (ಇದನ್ನು ಅನೋಮಿ **(anomie -** ನೈತಿಕ ಕಟ್ಟುಪಾಡುಗಳು ಇಲ್ಲದಿರುವುದು) ಎಂದು ಕರೆಯುತ್ತಾನೆ) ಪರಿಸ್ಥಿತಿಯೊಂದನ್ನು ಪ್ರೋತ್ಸಾಹಿಸುವ ಸಾಧ್ಯತೆಯೂ ಇದೆ. ನೈತಿಕ ಕಟ್ಟುಪಾಡುಗಳಿಲ್ಲದ ಪರಿಸ್ಥಿತಿಯು ಅಸ್ತಿತ್ವದಲ್ಲಿರುವ ಸಂಬಂಧಗಳನ್ನು ಅಡ್ಡಿಪಡಿಸುವ ಮತ್ತು ಅಸ್ತಿತ್ವದಲ್ಲಿರುವ ಮೌಲ್ಯಗಳನ್ನು ಪ್ರಶ್ನೆಗೊಳಪಡಿಸುವ ಸಮಾಜದ ಬದಲಾವಣೆಗಳ ಪರಿಣಾಮದಿಂದ ಉಂಟಾಗುತ್ತದೆ. ಇದು ಹೆಚ್ಚು ಪ್ರಮಾಣದ ಆತ್ಮಹತ್ಯೆಗಳಂತಹ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗಬಹುದು (ನೋಡಿ ಪು. ೭೯೫–೮). ಅದೇನೇ ಇದ್ದರೂ, ಸಮಾಜದ ಸಾಮೂಹಿಕ ಪ್ರಜ್ಞೆಯನ್ನು ಉಳಿಸಿಕೊಂಡು ಹೋಗಲು ಇನ್ನೂ ಸಾಧ್ಯವಿದೆ. ಕೈಗಾರಿಕಾ ಸಮಾಜದಲ್ಲಿನ ಜನರ ಸಾಮಾಜಿಕ ಐಕ್ಯತೆಯನ್ನು ಗಟ್ಟಿಗೊಳಿಸುವಲ್ಲಿ ಶಿಕ್ಷಣ ವ್ಯವಸ್ಥೆ ಮತ್ತು ವೃತ್ತಿಪರ ಸಂಘಗಳು ಸಹಾಯಕವಾಗುವ ಸಾಧ್ಯತೆ ಇದೆ ಎಂದು ಡುರ್ಖೈಮ್ ಸೂಚಿಸುತ್ತಾನೆ.

**ಉಪಸಂಹಾರ**

ಹೀಗೆ ಡುರ್ಖೈಮ್‌ನ ಪ್ರಕಾರ ಸಾಮಾನ್ಯಸಂಸ್ಕೃತಿ ಅಥವಾ ಸಾಮೂಹಿಕ ಪ್ರಜ್ಞೆಯು ಸಮಾಜವೊಂದು ಅಡೆತಡೆಯಿಲ್ಲದೆ ನಡೆಯಲು ಅಗತ್ಯವಾಗಿದೆ. ಈ ಸಾಮಾನ್ಯಸಂಸ್ಕೃತಿಯು ವ್ಯಕ್ತಿಗಳ ಮನದಿಚ್ಛೆ ಮತ್ತು ಆಯ್ಕೆಗಳನ್ನು ಮೀರಿದ ಅಸ್ತಿತ್ವವನ್ನು ಹೊಂದಿರುತ್ತದೆ ಮತ್ತು ಇದು

ಅವರ ವರ್ತನೆಗಳನ್ನು ನಿರ್ಬಂಧಿಸುತ್ತದೆ.  ಇದು ಪೀಳಿಗೆಯಿಂದ ಪೀಳಿಗೆಗೆ ಬಳುವಳಿಯಾಗಿ ಬರುತ್ತದೆ. ಡುರ್ಖೈಮ್‌ನ ಪ್ರಕಾರ ಸಾಮೂಹಿಕ ಪ್ರಜ್ಞೆಯು 'ತಲೆಮಾರಿನಿಂದ ತಲೆಮಾರಿಗೆ ಬದಲಾಗುವುದಿಲ್ಲ, ಆದರೆ ಬದಲಾಗಿ ಅದು ಸತತ ತಲೆಮಾರುಗಳನ್ನು ಪರಸ್ಪರ ಬೆಸೆಯುತ್ತದೆ. ಹಾಗಾಗಿ ಇದು ನಿರ್ದಿಷ್ಟ ಪ್ರಜ್ಞೆಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆಯಾದರೂ, ಇದನ್ನು ಆ ಮೂಲಕ ಮಾತ್ರವೇ ಸಾಧಿಸಲಾಗುವುದು.

ಜನರು ಶಿಕ್ಷೆಗೊಳಗಾಗುವ ಅಪಾಯಸಂಭವವನ್ನು ತಪ್ಪಿಸಬೇಕಾದರೆ  ಅವರು ತಮ್ಮ ಸಮಾಜದ ಸಂಸ್ಕೃತಿಯನ್ನು ಅನುಸರಿಸಲೇ ಬೇಕಾಗುತ್ತದೆ. ಒಂದು ಸಮಾಜಕ್ಕೆ ಸಾಮನ್ಯಸಂಸ್ಕೃತಿಯ ಅಗತ್ಯವಿದೆಯಾದರೂ, ಶ್ರಮವಿಭಜನೆ ಮತ್ತು ಕ್ಷಿಪ್ರಗತಿಯ ಕೈಗಾರಿಕಾ ಸಮಾಜಗಳ ಬೆಳವಣಿಗೆಯು ಅದನ್ನು ಅಪಾಯಕ್ಕೊಡ್ಡಬಹುದು ಮತ್ತು ಅದನ್ನು ಬೆಂಬಲಿಸಲು ಸಕಾರಾತ್ಮಕ ಪ್ರಯತ್ನಗಳನ್ನು  ಮಾಡಬೇಕಾಗುತ್ತದೆ.

## ಟೀಕೆಗಳು ಮತ್ತು ಡುರ್ಖೈಮ್‌ನ ಮೌಲ್ಯಮಾಪನ

ಡುರ್ಖೈಮ್‌ನ ಕೃತಿಯನ್ನು ವ್ಯಾಪಕವಾಗಿ ಟೀಕಿಸಲಾಗಿದೆ. ರಾಡ್ನಿ ನೀಡಮ್ (Rodney Needham)(೧೯೬೩) ಅವರು 'ಸಮಾಜದ ಸ್ವರೂಪ ಹಾಗೂ ವರ್ಗೀಕರಣದ ಸ್ವರೂಪದ ನಡುವೆ ಹೊಂದಾಣಿಕೆಯ ಕೊರತೆ ಇದೆ' ಎನ್ನುವ ನೆಲೆಯಲ್ಲಿ ಪ್ರಾಚೀನ ವರ್ಗೀಕರಣದ ಮೇಲೆ ಡುರ್ಖೈಮ್ ಮತ್ತು ಮಾಸ್ ಮಾಡಿದ ಅಧ್ಯಯನವನ್ನು ಪ್ರಶ್ನಿಸಿದ್ದಾರೆ. ಉದಾಹರಣೆಗೆ, ಪೋರ್ಟ್ ಮೆಕೆ ಮೊಯಿಟಿಸ್‌ಗಳು ವಾಸ್ತವವಾಗಿ ವೈವಾಹಿಕ ಕುಲಗಳಾಗಿ ವಿಭಜನೆಗೊಂಡಿವೆ. ಆದ್ದರಿಂದ ಅವರು ದ್ವಿಗುಣ ವರ್ಗೀಕರಣ ವ್ಯವಸ್ಥೆಯ ಬದಲು ಚತುರ್ಗುಣ ವರ್ಗೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವರು ಎಂದು ನೀವು ನಿರೀಕ್ಷಿಸುತ್ತೀರಿ. ಈ ಪುರಾವೆಯು ಅವರ ವಾದವನ್ನು ಬೆಂಬಲಿಸುವುದಿಲ್ಲವಾದ್ದರಿಂದ ಡುರ್ಖೈಮ್ ಮತ್ತು ಮಾಸ್ ಇದನ್ನು ಕಡೆಗಣಿಸುತ್ತಾರೆ.

ರಿಲಿಜನ್ (ನೋಡಿ ಪು.೩೯೭)  ಮತ್ತು ಆತ್ಮಹತ್ಯೆ (ನೋಡಿ ಪು.೭೯೪–೮೦೩) ಮೇಲಿನ ಡುರ್ಖೈಮ್‌ನ ಕೃತಿಗಳು ಸಹ ಟೀಕೆಗಳಿಗೆ ಒಳಗಾಗಿವೆ. ಮಾನವ ಸಂಸ್ಕೃತಿಯು ಸಾಮಾಜಿಕ ರಚನೆಯಿಂದ ನಿರ್ಧಾರಿತವಾಗುತ್ತದೆ ಎಂಬುದನ್ನು ಡುರ್ಖೈಮ್‌ನ ಕೃತಿಗಳು ಉತ್ಪ್ರೇಕ್ಷಿಸುತ್ತದೆ ಎಂಬ ಕಾರಣಕ್ಕೆ ಸಾಮಾನ್ಯವಾಗಿ ಟೀಕಿಸಲಾಗಿದೆ. ಡುರ್ಖೈಮ್‌ನ ಕೃತಿಗಳು ಮಾನವ ಸೃಜನಶೀಲತೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಮತ್ತು ಗುಂಪುಗಳ ನಡುವಿನ ಉಪಸಂಸ್ಕೃತಿಯ ಭಿನ್ನತೆಯನ್ನು ಕುರಿತು ಏನನ್ನೂ ಹೇಳುವುದಿಲ್ಲ.  ಆದಾಗ್ಯೂ, ಡುರ್ಖೈಮ್ ಅವರು ಸಂಸ್ಕೃತಿಯ ಒಂದು ಸಾಮಾಜಿಕ ಸಿದ್ಧಾಂತದ ಅಭಿವೃದ್ಧಿಗೆ ಮಾರ್ಗವನ್ನು ತೋರಿಸಿಕೊಟ್ಟರು ಮತ್ತು ಅವರು ಸಾಮಾಜಿಕ ಅಂಶಗಳು ಸಂಸ್ಕೃತಿಯನ್ನು ರೂಪಿಸುವ ರೀತಿಗಳನ್ನು ಪರಿಶೀಲಿಸುವಂತೆ ನಂತರದ ಬರಹಗಾರರನ್ನು ಪ್ರೇರೇಪಿಸಿದರು.

# ಸಂಸ್ಕೃತಿ ಮತ್ತು ಅಸ್ಮಿತೆಯ ಮಾರ್ಕ್ಸ್ ಸಿದ್ಧಾಂತಗಳು

## ಸಂಸ್ಕೃತಿಯನ್ನು ಕುರಿತು ಕಾರ್ಲ್‌ಮಾರ್ಕ್ಸ್

ಡುರ್ಖೈಮ್‌ನಂತೆ ಮಾರ್ಕ್ಸ್ ಸಹ ಸಂಸ್ಕೃತಿಯ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಬಳಕೆ ಮಾಡಲಿಲ್ಲ. ಆದಾಗ್ಯೂ, ವ್ಯಾಪಕವಾದ ಅವನ ಬರಹಗಳೊಳಗೆ ಸಂಸ್ಕೃತಿಯ ಒಂದು ಸಿದ್ಧಾಂತವನ್ನು ರೂಪಿಸುವಂತಹ ಹಲವು ಚಿಂತನೆಗಳು ಇರುವುದು ಕಂಡುಬರುತ್ತದೆ (ಸಮಾಜದ ಜೀವನ ವಿಧಾನ ಎಂಬ ಅರ್ಥದಲ್ಲಿ). ಇದಲ್ಲದೆ, ಮಾರ್ಕ್ಸ್ ಕಲೆ ಮತ್ತು ಸಾಹಿತ್ಯದ ಮೇಲೆ ಕೆಲವು ಚಿಂತನೆಗಳನ್ನೂ ಸಹ ಅಭಿವೃದ್ಧಿಪಡಿಸಿದ್ದಾನೆ.

### ಸಂಸ್ಕೃತಿಯ ಮೂಲಗಳು

ಕಾರ್ಯಾತ್ಮಕವಾದಿಗಳಂತೆ, ಮಾರ್ಕ್ಸ್ ಮಾನವ ಸಂಸ್ಕೃತಿಗೆ ಒಂದು ಸಾಮಾಜಿಕ ಮೂಲವಿದೆ ಮತ್ತು ಅದನ್ನು ಪ್ರಕೃತಿಯಿಂದ ಅಥವಾ ಮಾನವನಲ್ಲಿ ಅಂತರ್ಗತವಾಗಿರುವ ಮೂಲಪ್ರವೃತ್ತಿಯಿಂದ ನೇರವಾಗಿ ಹುಟ್ಟುವಂತೆ ನೋಡಲಾಗುವುದಿಲ್ಲ ಎಂದು ವಾದಿಸಿದನು. ಸಂಸ್ಕೃತಿಯು ಮನುಕುಲದ ಮೊದಲ ಸಮಾಜಗಳ ಸೃಷ್ಟಿಯಿಂದ ಹುಟ್ಟಿಕೊಂಡಿದೆ. ಡುರ್ಖೈಮ್‌ನಂತೆ ಮಾರ್ಕ್ಸ್ ಸಂಸ್ಕೃತಿಯನ್ನು ಸಾಮಾಜಿಕ ರಚನೆಯಿಂದ ಹುಟ್ಟಿಕೊಂಡ ಪ್ರಾಚೀನ ವರ್ಗೀಕರಣ ವ್ಯವಸ್ಥೆಗಳ ಮೂಲಕ ಅಭಿವೃದ್ಧಿಗೊಳ್ಳುತ್ತದೆ ಎಂದು ನೋಡಲಿಲ್ಲ. ಬದಲಿಗೆ ಮಾನವ ಶ್ರಮದ ಭೌತಿಕ ಮೂಲದಲ್ಲಿ ಸಂಸ್ಕೃತಿ ಅಡಗಿದೆ ಎಂದು ಅವನು ನಂಬಿದ್ದನು.

ಒಬ್ಬ ಭೌತಿಕವಾದಿಯಾಗಿ ಮಾರ್ಕ್ಸ್ ಭೌತಿಕ ಪರಿಸರ ಹಾಗೂ ಆರ್ಥಿಕ ಚಟುವಟಿಕೆಗಳು ಮಾನವ ಪ್ರಜ್ಞೆಯನ್ನು ರೂಪಿಸುತ್ತವೆ ಎಂದು ನಂಬಿದ್ದನು. **ಎಕನಾಮಿಕಲ್ ಆಂಡ್ ಫಿಲೊಸಾಫಿಕಲ್ ಮ್ಯಾನುಸ್ಕ್ರಿಪ್ಟ್ಸ್ (Economical and Philosophical Manuscripts)** (ಮೊದಲ ಪ್ರಕಟಣೆ 1844)ನಲ್ಲಿ ಮಾರ್ಕ್ಸ್ ಹೀಗೆ ವಾದಿಸಿದನು: 'ಪ್ರಾಣಿಯು ತನ್ನ ಜೀವ–ಕ್ರಿಯೆ (life-activity)ಯಿಂದ ಪ್ರತ್ಯೇಕಿಸಿಕೊಳ್ಳುವುದಿಲ್ಲ. ಅದು ಅದರ ಜೀವ–ಕ್ರಿಯೆಯೇ ಆಗಿರುತ್ತದೆ. ಮಾನವನು ತನ್ನ ಜೀವ–ಕ್ರಿಯೆಯನ್ನೇ ತನ್ನ ಇಚ್ಛೆ ಮತ್ತು ತನ್ನ ಪ್ರಜ್ಞೆಯ ವಸ್ತುವಾಗಿರಿಸಿಕೊಂಡಿರುತ್ತಾನೆ. ಅವನಿಗೆ ಪ್ರಜ್ಞಾಪೂರ್ವಕ ಜೀವ–ಕ್ರಿಯೆಯಿರುತ್ತದೆ' (ಬ್ಯಾಕ್ಸೆಂಡಾಲ್ (Baxandall) ಮತ್ತು ಮೊರಾಸ್ಕಿ (Morawski) ಉಲ್ಲೇಖಿಸಿದಂತೆ, 1974).

ಈ ಉದ್ಧೃತ ಭಾಗದಲ್ಲಿ, ಪ್ರಾಣಿಗಳು ಬೇಟೆಯಾಡುವುದು ಅಥವಾ ಗೂಡು ಕಟ್ಟುವುದು ಮುಂತಾದ ಕ್ರಿಯೆಗಳಿಂದ ಯಾವುದೇ ಪ್ರತ್ಯೇಕವಾದ ಪ್ರಜ್ಞೆಯನ್ನು ಹೊಂದಿರುವುದಿಲ್ಲ ಎಂದು ಮಾರ್ಕ್ಸ್ ವಾದಿಸುತ್ತಾನೆ. ಪ್ರಾಣಿಗಳು ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುತ್ತವಾದರೂ ಅದು ಅವುಗಳ ತಕ್ಷಣದ ಅಗತ್ಯಗಳನ್ನು ಪೂರೈಸಿಕೊಳ್ಳಲು ಮಾತ್ರ ಆಗಿರುತ್ತದೆ. ಆದಾಗ್ಯೂ, ಮನುಷ್ಯನು ತನ್ನ ಅಗತ್ಯಕ್ಕಿಂತ ಉತ್ಪಾದಿಸುತ್ತಾನೆ.

**Commented [k4]:** If the sentence is literally translated then it contradicts the previous sentence being that animals do not posess a consciousness separate from their life-activities. Hence this correction.

ಮಾನವರು ಒಂದುಗೂಡಿ ಸಾಮಾಜಿಕ ಗುಂಪುಗಳನ್ನು ರಚಿಸಿಕೊಂಡರೆ ಅವರು ಅಗತ್ಯವಿಲ್ಲದಿದ್ದರೂ ಕೂಡ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಮಾರ್ಕ್ಸ್ ಹೇಳುವಂತೆ: 'ಮಾನವನು ಅವನು ದೈಹಿಕವಾದ ಅಗತ್ಯಗಳಿಂದ ಮುಕ್ತನಾಗಿದ್ದಾಗ ಕೂಡ ಉತ್ಪಾದಿಸುತ್ತಾನೆ ಮತ್ತು ಅವನು ಅಂತಹ ನಿರ್ಬಂಧಗಳಿಂದ ಮುಕ್ತವಾದಾಗ ಮಾತ್ರ ನಿಜವಾಗಿಯೂ ಸೃಷ್ಟಿಸುತ್ತಾನೆ. ಆದ್ದರಿಂದ ಮಾನವನು, ಸೌಂದರ್ಯದ ನಿಯಮಗಳಿಗನುಸಾರವಾಗಿಯೂ ಕೂಡ ವಸ್ತುಗಳನ್ನು ರೂಪಿಸುತ್ತಾನೆ'. ಕಾರಣ ಮಾನವರು ಸಾಮಾಜಿಕ ಗುಂಪುಗಳನ್ನು ಒಮ್ಮೆ ರಚಿಸಿಕೊಂಡನೆಂದರೆ ಅವರ ಭೌತಿಕ ಉಳಿವಿಗೆ ಅಗತ್ಯವಾದುದಕ್ಕಿಂತಲೂ ಹೆಚ್ಚಾಗಿ ಉತ್ಪಾದಿಸುತ್ತಾರೆ. ಅವರು ವಸ್ತುಗಳ ಸೌಂದರ್ಯ ಆಕರ್ಷಣೆಯ ಕಾರಣ ಅವುಗಳನ್ನು ಸೃಷ್ಟಿಸಲು ಪ್ರಾರಂಭಿಸುತ್ತಾರೆ. ಅವರು ವಸ್ತುಗಳನ್ನು ಉತ್ಪಾದನೆ ಮಾಡುವುದು ಅವು ಹಸಿವು ಮತ್ತು ಬಾಯಾರಿಕೆಗಳಂತಹ ಅಗತ್ಯಗಳನ್ನು ಪೂರೈಸುತ್ತವೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಅವು ಸಂತೋಷ ನೀಡುತ್ತವೆ ಎನ್ನುವ ಕಾರಣಕ್ಕೆ.

ಮಾರ್ಕ್ಸ್‌ನ ಪ್ರಕಾರ, ಮಾನವನ ಉತ್ಪಾದಕ ಚಟುವಟಿಕೆಯಿಂದ ಸಂಸ್ಕೃತಿ ಹುಟ್ಟುತ್ತದೆ. ಮಾನವನು ತನ್ನ ಉಳಿವಿನ ಅಗತ್ಯಕ್ಕಿಂತ ಮೀರಿದ ಕೆಲಸವನ್ನು ಮಾಡುತ್ತಾ ಹೋದಂತೆ ಸ್ವಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾನೆ. ಈ ಪ್ರಕ್ರಿಯೆಯು ತಮ್ಮದೇ ಆದ ಸಂಸ್ಕೃತಿಯನ್ನು ಸಕ್ರಿಯವಾಗಿ ರಚಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. *ಕ್ಯಾಪಿಟಲ್ (Capital)* ಕೃತಿಯಲ್ಲಿ (ಪ್ರಥಮ ಪ್ರಕಟಣೆ 1867) ಮಾರ್ಕ್ಸ್ ಈ ವಿಷಯದ ಕುರಿತಾಗಿ ಮತ್ತಷ್ಟು ವಿಸ್ತರಿಸುತ್ತಾನೆ. ಅವನು, ಮಾನವ ಕೆಲಸಗಾರನ ಕಲ್ಪನೆ ಮತ್ತು ಸೃಜನಶೀಲತೆಗಳು ಜೇನು ನೊಣಗಳ ಅಥವಾ ಇತರೆ ಪ್ರಾಣಿಗಳ ಯಾಂತ್ರಿಕ ವರ್ತನೆಗಳಿಗಿಂತ ಸೃಜನಾತ್ಮಕವಾಗಿ ವಿಭಿನ್ನವಾಗಿರುತ್ತದೆ ಎಂದು ಸೂಚಿಸುತ್ತಾನೆ. ಅವನು ಹೇಳುವಂತೆ:

> ಮೇಣದಲ್ಲಿ ಒಂದು ಚಿಕ್ಕಕಣಿವೆಯನ್ನು ನಿರ್ಮಿಸುವ ಮೊದಲು ಅದನ್ನು ತನ್ನ ತಲೆಯಲ್ಲಿ ನಿರ್ಮಿಸಿಕೊಳ್ಳುತ್ತಾನೆ ಎನ್ನುವ ವಾಸ್ತವ ಕಾರಣದಿಂದ ಅತೀ ಸಾಮಾನ್ಯವಾದ ವಾಸ್ತುಶಿಲ್ಪಿಯು ಅತ್ಯುತ್ತಮ ಜೇನ್ನೊಣಗಳ ಗುಂಪುಗಳಿಗಿಂದ ಸ್ಪಷ್ಟವಾಗಿ ಭಿನ್ನವಾಗಿರುತ್ತಾನೆ. ಶ್ರಮದ ಪ್ರಕ್ರಿಯೆಯ ಕೊನೆಯಲ್ಲಿ ಸಾಧಿಸಿದ ಫಲಿತಾಂಶವು ಅದರ ಪ್ರಾರಂಭದಲ್ಲಿಯೆ ಒಂದು ಮಾದರಿಯ ರೂಪದಲ್ಲಿ ಕೆಲಸಗಾರನ ಕಲ್ಪನೆಯಲ್ಲಿ ಅಸ್ತಿತ್ವದಲ್ಲಿತ್ತು. ಪ್ರಕೃತಿಯ ಸ್ವರೂಪದಲ್ಲಿ ಕೇವಲ ಒಂದು ಬದಲಾವಣೆ ತರುವುದಕ್ಕಿಂತ ಹೆಚ್ಚಾಗಿ ಅವನು ಪ್ರಜ್ಞಾಪೂರ್ವಕವಾಗಿ ಪ್ರಕೃತಿಯೊಳಗೆ ತನ್ನದೇ ಆದ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಕೆಲಸ ಮಾಡುತ್ತಾನೆ. ಬ್ಯಾಕ್ಸೆಂಡಾಲ್ ಮತ್ತು ಮೊರಾಸ್ಕಿ ಉಲ್ಲೇಖಿಸಿದಂತೆ, 1974

**Commented [k5]:** I have used utpaadane and srushti synonymously for produce.

**Commented [k6]:** The literal translation is correct but it does not make any sense even in the original for Dell is a valley as rightly translated but valleys are natural formations . Or one is not sure if Dell also means dwelling or the reference to wax is to the bees hollowing out a small space to secrete honey. If so then the translation has to change. One could have interpreted and rewritten to make sense but it would not have been faithful to the original. To please check

## ಪರಕೀಯತೆ  ಮತ್ತು ಸಂಸ್ಕೃತಿ

ಮಾರ್ಕ್ಸ್ ಪ್ರಕಾರ, ಮಾನವರು ಸ್ವತಂತ್ರ ವ್ಯಕ್ತಿಗಳಾಗಿ ಬದುಕಿದಾಗ, ಅವರು ತಮ್ಮ ಕಲ್ಪನೆಗಳನ್ನು ಬಳಸಿಕೊಂಡು ವಸ್ತುಗಳನ್ನು ಉತ್ಪಾದಿಸುವ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮೂಲಕ ತಮ್ಮ ಸಂತೃಪ್ತಿಯನ್ನು ಪಡೆದುಕೊಳ್ಳುತ್ತಾರೆ. ಆದಾಗ್ಯೂ,  ಖಾಸಗಿ ಆಸ್ತಿಯ ಅಸ್ತಿತ್ವದಿಂದಾಗಿ ಮಾನವನ ಸ್ವಾತಂತ್ರ್ಯವು  ನಿರ್ಬಂಧಿತವಾದಾಗ  ಸಮಸ್ಯೆಗಳು ಉದ್ಭವಿಸುತ್ತವೆ. ಕೆಲವು ಮನುಷ್ಯರು ಇತರರ ಶೋಷಣೆಯಿಂದ  ಖಾಸಗಿ ಆಸ್ತಿಯನ್ನು ದೊಡ್ಡ ಪ್ರಮಾಣದಲ್ಲಿ ಶೇಖರಿಸಲು ಪ್ರಾರಂಭಿಸುವರು ಮತ್ತು  ಆಸ್ತಿಯಿಲ್ಲದವರು  ಅವರ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವರು. ಅವರಿಗೆ ತಮ್ಮ ಭೌತಿಕ ಅಸ್ತಿತ್ವವನ್ನು ಉಳಿಸಿಕೊಳ್ಳುವಷ್ಟು ಉತ್ಪಾದಿಸಲು ಅಗತ್ಯವಾದ ಸಲಕರಣೆಗಳು ಅಥವಾ ಭೂಮಿಯಂತಹ **ಉತ್ಪಾದನಾ ಸಾಧನಗಳ (means of production)** ಕೊರತೆ ಇರುತ್ತದೆ. ಬದಲಾಗಿ, ಅವರು ಉತ್ಪಾದನಾ ಸಾಧನಗಳನ್ನು ಹೊಂದಿರುವ  ಇತರರಿಗಾಗಿ  ಕೆಲಸ ಮಾಡಬೇಕಾಗುತ್ತದೆ.  ಅವರು ತಮ್ಮ ಉತ್ಪಾದಕ ಚಟುವಟಿಕೆ ಅಥವಾ ಕೆಲಸವನ್ನು ಸಂಘಟಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ. ಅವರು ಬದುಕುವ ಸಲುವಾಗಿ ಉತ್ಪಾದನಾ ಸಾಧನಗಳ ಮಾಲೀಕರಿಗಾಗಿ ಕೆಲಸ ಮಾಡಲೇ ಬೇಕಾದ ಒತ್ತಾಯಕ್ಕೊಳಗಾಗುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರು ಪರಕೀಯತೆಗೆ ಒಳಗಾಗುತ್ತಾರೆ.

**ಪರಕೀಯತೆ (Alienation)** ಎನ್ನುವುದು ಜನರು ತಾವು ಮಾಡುವ ಕೆಲಸದಿಂದ (ಉತ್ಪಾದನಾ ಕ್ರಿಯೆ), ಇತರ ಕೆಲಸಗಾರರಿಂದ, ತಾವು ಉತ್ಪಾದಿಸಿದ ವಸ್ತುವಿನಿಂದ (ಅಂತಿಕ ಉತ್ಪಾದನೆ) ದೂರವಾಗುವ ಕಾರಣ – ಏಕೆಂದರೆ ಅವರು ಅದರ ಒಡೆತನವನ್ನು ಹೊಂದಿರದ ಕಾರಣ – ಪರಕೀಯ ಭಾವನೆ ಅನುಭವಿಸುವುದನ್ನು ಒಳಗೊಳ್ಳುತ್ತದೆ, ಮತ್ತು ಅವರು ತಮ್ಮ ಮಾನವೀಯ ಸತ್ವದಿಂದಲೂ ಕೂಡ ಪರಕೀಯರಾಗಿರುತ್ತಾರೆ. ಪರಕೀಯಗೊಂಡಿರುವ ಕಾರ್ಮಿಕರು ತಮ್ಮ ಕೆಲಸದಲ್ಲಿ ತಮ್ಮ ಸೃಜನಶೀಲತೆಯನ್ನು ಉಪಯೋಗಿಸಿಕೊಂಡು ತಮ್ಮದೇ ಆದ ಮಾನವೀಯತೆಯನ್ನು ಸ್ವತಂತ್ರವಾಗಿ  ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ.

## ಆಳುವ-ವರ್ಗದ ಐಡಿಯಾಲಜಿಯಾಗಿ ಸಂಸ್ಕೃತಿ

**Commented [k7]:** Could vicharadhaare be a possible word for ideology?

ವರ್ಗದ ಆಧಾರದ ಮೇಲೆ ವಿಭಜಿತಗೊಂಡ ಸಮಾಜಗಳಲ್ಲಿ ಸಂಸ್ಕೃತಿಯನ್ನು ಅಲ್ಲಿನ **ಆಳುವ-ವರ್ಗದ ಐಡಿಯಾಲಜಿ (ruling-class ideology)**ಗಿಂತ ಮಿಗಿಲಾಗಿ ನೋಡಲು ಸ್ವಲ್ಪ ಮಾತ್ರವೇ ಸಾಧ್ಯ ಎಂದು ಪ್ರತಿಪಾದಿಸುವ ಮೂಲಕ ಮಾರ್ಕ್ಸ್ ತನ್ನ ಚಿಂತನೆಗಳನ್ನು ಮುಂದುವರೆಸಿಕೊಂಡು ಹೋಗುತ್ತಾನೆ. ಈ ದೃಷ್ಟಿಕೋನದ ಪ್ರಕಾರ ಸಂಸ್ಕೃತಿ ಎನ್ನುವುದು ಕೇವಲ ಪ್ರಬಲ ವರ್ಗವು ಎತ್ತಿಹಿಡಿದ ಜಗತ್ತಿನ ಒಂದು ವಿಕೃತ ರೂಪದ ಅಭಿವ್ಯಕ್ತಿ ಅಷ್ಟೇ.  ಇದು ಸಮಾಜದ ಮೇಲ್‌ರಚನೆಯ ಭಾಗವಾಗಿರುತ್ತದೆ. ಆರ್ಥಿಕ ತಳಹದಿ ಅಥವಾ ಮೂಲರಚನೆಯು ಮೇಲ್‌ರಚನೆಯನ್ನು ರೂಪಿಸುತ್ತವೆ. ಆಳುವ-ವರ್ಗವು – ಅಂದರೆ ಉತ್ಪಾದನಾ ಸಾಧನಗಳ ಮಾಲೀಕರು – ತಮ್ಮ ಆರ್ಥಿಕ ಶಕ್ತಿಯನ್ನು ಉಪಯೋಗಿಸಿಕೊಳ್ಳುವುದರ ಮೂಲಕ ಸಮಾಜದ

ಸಂಸ್ಕೃತಿಯನ್ನು ರೂಪಿಸುತ್ತಾರೆ. *ಜರ್ಮನ್ ಐಡಿಯಾಲಜಿ (The German Ideology)* ಯಲ್ಲಿ (ಮೊದಲ ಪ್ರಕಟಣೆ 1846) ಮಾರ್ಕ್ಸ್ ಮತ್ತು ಏಂಗೆಲ್ಸ್ ಹೀಗೆ ವಾದಿಸುತ್ತಾರೆ:

> ಪ್ರತಿಯೊಂದು ಕಾಲದಲ್ಲಿಯೂ ಆಳುವ ವರ್ಗದ ಚಿಂತನೆಗಳೇ ಪ್ರಬಲ ಚಿಂತನೆಗಳಾಗಿರುತ್ತವೆ; ಅಂದರೆ ಸಮಾಜದಲ್ಲಿ ಪ್ರಬಲ ಭೌತಿಕ ಶಕ್ತಿಯಾಗಿರುವ ವರ್ಗವು ಅದೇ ಸಮಯದಲ್ಲಿ ಅದರ ಪ್ರಬಲ ಬೌದ್ಧಿಕ ಶಕ್ತಿಯೂ ಆಗಿರುತ್ತದೆ. ಭೌತಿಕ ವಸ್ತು ಉತ್ಪಾದನೆಯ ಸಾಧನಗಳನ್ನು ಹೊಂದಿರುವ ವರ್ಗವು ಅದೇ ಸಮಯದಲ್ಲಿ ಜ್ಞಾನಸೃಷ್ಟಿಯ ಮೇಲೂ ಪ್ರಾಬಲ್ಯ ಸಾಧಿಸುತ್ತದೆ. ಇದರ ಪರಿಣಾಮವಾಗಿ ಜ್ಞಾನಸೃಷ್ಟಿಯ ಸಾಧನಗಳ ಕೊರತೆಯನ್ನು ಹೊಂದಿರುವವರ ಆಲೋಚನೆಗಳು, ಸಾಮಾನ್ಯವಾಗಿ, ಅವೇ ಅದರ ನಿಯಂತ್ರಣಕ್ಕೊಳಪಟ್ಟಿರುತ್ತವೆ. ಪ್ರಬಲವಾದ ಚಿಂತನೆಗಳು ಎಂದರೆ ಚಿಂತನೆಗಳೆಂದು ಗ್ರಹಿಸಲ್ಪಟ್ಟ ಪ್ರಬಲ ಭೌತಿಕ ಸಂಬಂಧಗಳ ನಿರ್ದಿಷ್ಟ ಮಾದರಿಯ ಅಭಿವ್ಯಕ್ತಿಯೆ ಹೊರತು ಮತ್ತೇನಲ್ಲ. ಬಾಟಮೋರ್ (Bottomore) ಮತ್ತು ರೂಬೆಲ್ (Rubel) ಉಲ್ಲೇಖಿಸಿದಂತೆ, 1963

ಸಮಕಾಲೀನ ಮಾರ್ಕ್ಸ್‌ವಾದಿಗಳು ಸಮೂಹ ಮಾಧ್ಯಮಗಳಂತಹ ಸಂಸ್ಥೆಗಳ ಮಾರ್ಕ್ಸ್‌ವಾದಿ ಸಿದ್ಧಾಂತಗಳನ್ನು ಬೆಳೆಸುವಲ್ಲಿ ಇಂತಹ ಹೇಳಿಕೆಗಳನ್ನು ಆಧಾರವನ್ನಾಗಿ ಬಳಸಿಕೊಂಡಿದ್ದಾರೆ (ನೋಡಿ ಪು. 713–18).

ಆದಾಗ್ಯೂ, ಮಾರ್ಕ್ಸ್ ಮತ್ತು ಏಂಗಲ್ಸ್ ಅವರ ಬರಹಗಳು ಬಹಳಷ್ಟು ಅರ್ಥ ವಿವರಣೆಗಳಿಗೆ ತೆರೆದುಕೊಳ್ಳುತ್ತವೆ ಮತ್ತು ಸಮಾಜದ ಸಂಸ್ಕೃತಿಯ ಮೇಲ್‌ರಚನೆಯು ಸಂಪೂರ್ಣವಾಗಿ ಮೂಲರಚನೆಯಿಂದಲೇ ರೂಪಿಸಲ್ಪಟ್ಟಿರುತ್ತದೆ ಎಂದು ಅವು ಯಾವಾಗಲೂ ಪ್ರತಿಪಾದಿಸುವುದಿಲ್ಲ. ಇನ್ನೂ ಕೆಲವು ಸಂದರ್ಭಗಳಲ್ಲಿ ಮಾರ್ಕ್ಸ, ಅಥವಾ ಮಾರ್ಕ್ಸ್ ಮತ್ತು ಏಂಗಲ್ಸ್ ಮೂಲರಚನೆಯು ಸಂಸ್ಕೃತಿಯ ಮೇಲ್‌ರಚನೆಯನ್ನು ಪ್ರಭಾವಿಸುತ್ತವೆ, ಅಥವಾ, ಬಹುಶಃ ಅದಕ್ಕೆ ಮಿತಿಗಳನ್ನು ಇರಿಸುತ್ತವೆ ಆದರೆ ಅದನ್ನು ಸಂಪೂರ್ಣವಾಗಿ ನಿರ್ಧರಿಸುವುದಿಲ್ಲ ಎಂದು ವಾದಿಸಿದರು. ಮೂಲರಚನೆಯೊಳಗಿನ ಅಂಶಗಳು ಪರಸ್ಪರ ಪ್ರಭಾವಿಸುವ ಸಾಧ್ಯತೆಯೂ ಇದೆ (ಈ ದೃಷ್ಟಿಕೋನಗಳ ಹೆಚ್ಚಿನ ವಿವರಣೆಗೆ ನೋಡಿ ಪು. 867–72).

ಹಾಗಾಗಿ, ಮಾರ್ಕ್ಸ್‌ನ ಒಂದು ಅರ್ಥ ವಿವರಣೆಯು ಬಂಡವಾಳಶಾಹಿ ಸಮಾಜಗಳಲ್ಲಿರುವ ಎಲ್ಲ ಸಂಸ್ಕೃತಿಯನ್ನು ಆಳುವ-ವರ್ಗದ ಐಡಿಯಾಲಜಿಯ ಸೃಷ್ಟಿಯಾಗಿ ನೋಡುತ್ತದೆ. ಕಾರ್ಮಿಕ ವರ್ಗವು ಮಿಥ್ಯಾ ವರ್ಗ ಪ್ರಜ್ಞೆಯಿಂದ ಪೀಡಿತರಾಗಿರುವುದರಿಂದ ಅವರ ನಂಬಿಕೆಗಳು ಮತ್ತು ಸಂಸ್ಕೃತಿಯು ಆಳುವ ವರ್ಗದಿಂದಲೇ ರೂಪಗೊಳ್ಳುತ್ತದೆ ಎಂದು ಭಾವಿಸಲಾಗಿದೆ. ಈ ಸಿದ್ಧಾಂತವನ್ನು 'ಪ್ರಬಲ ಐಡಿಯಾಲಜಿಯ ಪ್ರತಿಪಾದನೆ' ಎಂದು ಕರೆಯಲಾಗಿದೆ (Abercrombie *et al.,* (ಆಬೆರ್‌ಕ್ರೊಮ್ಬೀ ಮತ್ತು ಇತರರು), 1980) ಕಾರ್ಮಿಕ ವರ್ಗ ಮತ್ತು ಇತರ ಸಂಸ್ಕೃತಿಗಳು ಆಡಳಿತ-ವರ್ಗದ ಹಿಡಿತದಿಂದ ಮತ್ತು

ಆರ್ಥಿಕ ತಳಹದಿಯಿಂದ ಸ್ವಲ್ಪ ಸ್ವಾತಂತ್ರ್ಯ ಅಥವಾ ಸಾಪೇಕ್ಷ ಸ್ವಾಯತ್ತತೆಯನ್ನು ಹೊಂದಿವೆ ಎಂದು ಇತರೆ ವ್ಯಾಖ್ಯಾನಗಳು ನೋಡುತ್ತವೆ.

**ವರ್ಗ ವ್ಯತ್ಯಾಸಗಳ ಪ್ರತಿಬಿಂಬವಾಗಿ ಸಂಸ್ಕೃತಿ**

ಇಷ್ಟೇ ಅಲ್ಲದೆ, ಮಾರ್ಕ್ಸ್‌ನ ಅರ್ಥ ವಿವರಣೆಗಳು ಸಂಸ್ಕೃತಿಗಳ ನಡುವಿನ ವರ್ಗ ವ್ಯತ್ಯಾಸಗಳನ್ನು ಒತ್ತಿ ಹೇಳುತ್ತವೆ. ಈ ದೃಷ್ಟಿಕೋನದಿಂದ ನೋಡಿದರೆ ವಿವಿಧ ವರ್ಗಗಳು ಯಾವಾಗಲೂ ವಿಭಿನ್ನ ಸಂಸ್ಕೃತಿಯನ್ನು ಹೊಂದಿರುತ್ತವೆ ಏಕೆಂದರೆ ಅವರ ಭೌತಿಕ ಅಸ್ತಿತ್ವದ ಸ್ಥಿತಿಗಳು ಸಹ ಭಿನ್ನವಾಗಿರುತ್ತದೆ. ಆಳುವ ವರ್ಗ ಅಥವಾ ಕಾರ್ಮಿಕ ವರ್ಗದ ಸದಸ್ಯರಾಗಿ ಜೀವಿಸುವವರ ವಿಭಿನ್ನ ಅನುಭವಗಳು ವಿಶ್ವದ ಬಗ್ಗೆ ವಿಭಿನ್ನವಾದ ದೃಷ್ಟಿಕೋನವನ್ನು ಹುಟ್ಟುಹಾಕುವುದರಿಂದ ಒಂದು ವಿಭಿನ್ನವಾದ ಸಂಸ್ಕೃತಿಯು ಹುಟ್ಟಿಕೊಳ್ಳುತ್ತದೆ. ಸ್ಟೆಫನ್ ಮೊರಾಸ್ಕಿಯು (Stefan Morawski) (1974) ಮಾರ್ಕ್ಸ್ ಮತ್ತು ಏಂಗಲ್ಸ್ ಅವರ ದೃಷ್ಟಿಕೋನಗಳ ಈ ಅರ್ಥ ವಿವರಣೆಯನ್ನು ಈ ಕೆಳಗಿನ ರೀತಿಯಲ್ಲಿ ವಿವರಿಸುತ್ತಾನೆ: 'ಐಡಿಯಾಲಜಿಯನ್ನು ಸಾಮಾಜಿಕ ವರ್ಗಗಳ ಧೋರಣೆಗಳು, ಹಿತಾಸಕ್ತಿಗಳು, ಅಥವಾ ಯೋಚನಾವಿಧಾನಗಳ (habits of thought) ಒಂದು ಮಾದರಿಯ ಹೇಳಿಕೆಗಳು ಅಥವಾ ಲಾಕ್ಷಣಿಕ ಅಭಿವ್ಯಕ್ತಿಯಾಗಿ ಪರಿಗಣಿಸಲಾಗುತ್ತದೆ.' ಹೀಗೆ, ಆಳುವ-ವರ್ಗವು ರಚಿಸಿದ ಸಾಹಿತ್ಯಕ್ಕಿಂತ ಕಾರ್ಮಿಕ ವರ್ಗದ ಸಾಹಿತ್ಯವು ವಿಭಿನ್ನವಾಗಿರುತ್ತದೆ.

ಆದಾಗ್ಯೂ, ಸಾಹಿತ್ಯದಂತಹ ಸಂಸ್ಕೃತಿಯ ರೂಪಗಳು, ಕೆಲವು ಬರಹಗಾರರ ಕೃತಿಗಳಲ್ಲಿ, ಬರಹಗಾರನ ವರ್ಗದ ಮೂಲವನ್ನೂ ಮೀರಿ ಸಮಾಜದ ಬಗ್ಗೆ ಒಳನೋಟಗಳನ್ನು ಗೋಚರವಾಗುವಂತೆ ಪ್ರಕಟಪಡಿಸುವ ಸಾಧ್ಯತೆ ಇದೆ ಎಂದು ಏಂಗಲ್ಸ್ ಒಪ್ಪಿಕೊಂಡರು. ಇದಕ್ಕೆ ಉದಾಹರಣೆಯೆಂದರೆ ಏಂಗಲ್ಸ್‌ರವರು ಜರ್ಮನ್ ಬರಹಗಾರ ಗೋಟಾ (Goethe) ವನ್ನು ಕುರಿತು ಮಾಡಿರುವ ಚರ್ಚೆ.

ಏಂಗಲ್ಸ್‌ನ ಪ್ರಕಾರ, ಗೋಟಾ ಅವರ ಕೃತಿಗಳು ಕೆಲವೊಮ್ಮೆ ಅವರ ವರ್ಗ ಹಿನ್ನೆಲೆಯಿಂದ ನಿರ್ಬಂಧಿತವಾಗಿತ್ತು. 'ಫ್ರಾಂಕ್‌ಫರ್ಟ್‌ನ ನಗರ ಸಭೆಯ ಚುನಾಯಿತ ಸದಸ್ಯ (Alderman (ಆಲ್ಡರ್ಮೆನ್))ನ ಅರಿವುಳ್ಳ ಮಗನಾಗಿ, ವೈಮಾರ (Weimar Republic (ವೈಮಾರ ಗಣರಾಜ್ಯ) – 1919 ರಿಂದ-1933 ವರೆಗೆ ಜರ್ಮನಿಯ ಪ್ರಭುತ್ವ) ಗೆ ಪ್ರಿವಿ ಕೌನ್ಸಿಲರ್ (privy councillor - ಪ್ರಭುತ್ವಕ್ಕೆ ಔಪಚಾರಿಕ ಸಲಹೆಗಾರ)' ಆಗಿ ಬದುಕಿದ ಅವನ ಆರಾಮದಾಯಕ ಮತ್ತು ಗೌರವಾನ್ವಿತ ಹಿನ್ನಲೆಯು ಕೆಲವೊಮ್ಮೆ ಗೋಟಾವನ್ನು ಜರ್ಮನ್ ಸಂಸ್ಕೃತಿಯ ವೈಭವವನ್ನು ಕೊಂಡಾಡುವಂತೆ ಪ್ರೇರೇಪಿಸಿತ್ತು. ಆದಾಗ್ಯೂ, ಮತ್ತೆ ಕೆಲವು ಬಾರಿ ಗೋಟಾನು 'ತನ್ನ ಸುತ್ತಲಿನ ದಾರಿದ್ರ್ಯವನ್ನು ನೋಡಿ ಹೇಸಿದ್ದ ಒಬ್ಬ ಅಸಾಮಾನ್ಯ ಕವಿಯಾಗಿದ್ದನು' (ಬ್ಯಾಕ್ಸೆಂಡಾಲ್ ಮತ್ತು ಮೊರಾಸ್ಕಿ ಉಲ್ಲೇಖಿಸಿದಂತೆ, 1974)

ಇಲ್ಲಿ, ಜನರು ಮಿಥ್ಯಾ ವರ್ಗ ಪ್ರಜ್ಞೆಯ ನಿಜವಾದ ಸ್ವರೂಪವನ್ನು ಗುರುತಿಸಿ ವರ್ಗ ಸಮಾಜಗಳಲ್ಲಿ ಕಂಡುಬರುವ ದಬ್ಬಾಳಿಕೆ ಮತ್ತು ಶೋಷಣೆಯನ್ನು ಗಣನೆಗೆ ತೆಗೆದುಕೊಳ್ಳುವ ಸಾಂಸ್ಕೃತಿಕ ಕೃತಿಗಳನ್ನು ಸೃಷ್ಟಿಸುವ ಸಾಧ್ಯತೆ ಇದೆ ಎನ್ನುವುದನ್ನು ಏಂಗಲ್ಸ್ ಎತ್ತಿತೋರಿಸುತ್ತಾನೆ. ಹೀಗೆ, ಸಾಹಿತ್ಯ ಮತ್ತು ಕಲೆಯ ಇತರ ರೂಪಗಳು ಮತ್ತು ಸಂಸ್ಕೃತಿಯ ಅಂಶಗಳು ವಿಭಿನ್ನ ವರ್ಗ ಗುಂಪುಗಳ ಅನುಭವಗಳನ್ನು ಪ್ರತಿಬಿಂಬಿಸುವ ಪ್ರವೃತ್ತಿಯನ್ನು ಹೊಂದಿರುತ್ತವೆ, ಆದರೆ ಕೆಲವು ಬಾರಿ ಅವು ಅದನ್ನೂ ಮೀರಿ ಸಮಾಜದ ಬಗೆಗಿನ ಸತ್ಯಕ್ಕೆ ಹತ್ತಿರವಾದ ಕೆಲವು ಅಂಶಗಳನ್ನು ಬಹಿರಂಗಪಡಿಸುವ ಸಾಧ್ಯತೆಯೂ ಇದೆ.

ಅಂತಿಮವಾಗಿ ಇಡೀ ಸಮಾಜದ ಸಂಸ್ಕೃತಿಯೇ ಬದಲಾಗುತ್ತದೆ ಎಂದು ಮಾರ್ಕ್ಸ್ ಮತ್ತು ಏಂಗಲ್ಸ್ ನಂಬಿದ್ದರು. ಕಾರ್ಮಿಕ ವರ್ಗದಲ್ಲಿ ವರ್ಗ ಪ್ರಜ್ಞೆಯ ಬೆಳೆವಣಿಗೆ ಆಗುತ್ತದೆ ಮತ್ತು ಅವರು ಆಳುವ ವರ್ಗದ ಸಿದ್ಧಾಂತದ ವಿರೂಪವನ್ನು ಗುರುತಿಸಲು ಪ್ರಾರಂಭಿಸುತ್ತಾರೆ; ಬಂಡವಾಳಶಾಹಿ ವ್ಯವಸ್ಥೆಯು ಸಮತಾವಾದಿ (communism (ಕಮ್ಯೂನಿಸಮ್)) ವ್ಯವಸ್ಥೆಯಾಗಿ ಬದಲಾಗುತ್ತದೆ ಮತ್ತು ಆಳುವ-ವರ್ಗದ ಪ್ರಾಬಲ್ಯ ಮತ್ತು ಶೋಷಣೆ ಇಲ್ಲವಾಗಿ, ಮಾನವರು ತಮ್ಮ ನೈಜ ಮಾನವೀಯತೆಯನ್ನು ವ್ಯಕ್ತಗೊಳಿಸುವ ವಸ್ತುಗಳನ್ನು ಸೃಷ್ಟಿಸುವ ಕಡೆಗೆ ಮರಳಲು ಸಾಧ್ಯವಾಗುತ್ತದೆ ಎಂದು ನಂಬಿದ್ದರು.

(ನಾವು ನಂತರದ ಮಾರ್ಕ್ಸ್‌ವಾದಿಗಳು ಮಾರ್ಕ್ಸ್ ಮತ್ತು ಏಂಗಲ್ಸ್ ಅವರ ಚಿಂತನೆಗಳನ್ನು ಬಳಸಿಕೊಂಡ ರೀತಿಯನ್ನು ಚರ್ಚಿಸಲು ಪ್ರಾರಂಭಿಸಿದಾಗ ಅವರ ಕೃತಿಗಳ ಸಾಮರ್ಥ್ಯ ಮತ್ತು ದೌರ್ಬಲ್ಯಗಳು ನಮಗೆ ಸ್ಪಷ್ಟವಾಗುತ್ತವೆ. ಮಾರ್ಕ್ಸ್ ಮತ್ತು ಏಂಗಲ್ಸ್ ಅವರ ಸಂಸ್ಕೃತಿಯ ಕುರಿತ ಸಿದ್ಧಾಂತಗಳಿಗೆ ಪ್ರಸ್ತುತವಾದ ಟೀಕೆಗಳು ಮತ್ತು ಮೌಲ್ಯಮಾಪನವನ್ನು ಪು.೭೭1–೮೨ ಮತ್ತು 401ರಲ್ಲಿ ಕಾಣಬಹುದು.)

## ಕಲೆಗಳ ಮಾರ್ಕ್ಸ್‌ವಾದಿ ಸಿದ್ಧಾಂತಗಳು

ಸಮಾಜಗಳ ಸಾಮಾನ್ಯ ಸಂಸ್ಕೃತಿಗಳ ಮಾರ್ಕ್ಸ್‌ವಾದಿ ಮತ್ತು ನವ್ಯ-ಮಾರ್ಕ್ಸ್‌ವಾದಿ ಸಿದ್ಧಾಂತಗಳನ್ನು ಈ ಪುಸ್ತಕದ ಮತ್ತೊಂದೆಡೆಯಲ್ಲಿ ಪರಿಶೀಲಿಸಲಾಗಿದೆ (ಉದಾಹರಣೆಗೆ, ನೋಡಿ ಪು. ೮೬೭–೭೦ ಮತ್ತು ೨೬–೯). ಈ ವಿಭಾಗವು ಕಲೆಗಳ ಮಾರ್ಕ್ಸ್‌ವಾದಿ ಸಿದ್ಧಾಂತಗಳು ಮತ್ತು ವಿಶೇಷವಾಗಿ ಸಾಹಿತ್ಯಕ್ಕೆ ಸಂಬಂಧಿಸಿದ ಸಿದ್ಧಾಂತಗಳ ಕಡೆ ಗಮನ ಹರಿಸುತ್ತದೆ.

### ಜಾನ್ ಬರ್ಗರ್ – ತೈಲ ವರ್ಣಚಿತ್ರಗಳು ಮತ್ತು ಖಾಸಗಿ ಸ್ವತ್ತು

#### ಆಳುವ-ವರ್ಗದ ಕಲೆ

ಹೆಚ್ಚು ಸಂಕೀರ್ಣವಲ್ಲದ ಸಿದ್ಧಾಂತಗಳಲ್ಲಿ ಒಂದಾದ ಕಲೆಗಳ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಜಾನ್ ಬರ್ಗರ್ (John Berger) (೧೯೭೨) ಮಂಡಿಸಿದನು. ೧೫೦೦ ಮತ್ತು ೧೯೦೦ರ ನಡುವೆ

ಚಿತ್ರಕಲಾಕಾರರಿಗೆ ಒಂದು ಪ್ರಬಲವಾದ ಸಾಧನವಾಗಿದ್ದ ತೈಲ ವರ್ಣಚಿತ್ರ ಮಾಧ್ಯಮವು ಆಳುವ ವರ್ಗಗಳ ಲೋಕದೃಷ್ಟಿಯನ್ನು ಪ್ರತಿಬಿಂಬಿಸುತ್ತಿತ್ತು ಎಂದು *Ways of Seeing (ವೇಸ್ ಆಫ್ ಸೀಯಿಂಗ್)* ಕೃತಿಯಲ್ಲಿ ಅವನು ವಾದಿಸುತ್ತಾನೆ. ಬರ್ಗರ್ ಹೇಳುವಂತೆ: 'ಯಾವುದೇ ಒಂದು ಅವಧಿಯ ಕಲೆಯು ಆಳುವ ವರ್ಗದ ಐಡಿಯಾಲಜಿಯ ಹಿತಾಸಕ್ತಿಗಳನ್ನು ಈಡೇರಿಸಲು ಹವಣಿಸುವ ಪ್ರವೃತ್ತಿಯನ್ನು ಹೊಂದಿರುತ್ತದೆ.' 1500–1900ರ ಅವಧಿಯಲ್ಲಿ, 'ಅಂತಿಮವಾಗಿ ಆಸ್ತಿ ಮತ್ತು ವಿನಿಮಯದ ಹೊಸ ಧೋರಣೆಗಳಿಂದ ನಿರ್ಧರಿತವಾದ ಲೋಕವನ್ನು ಗ್ರಹಿಸುವ ವಿಧಾನವು ತೈಲ ವರ್ಣಚಿತ್ರಗಳಲ್ಲಿ ತನ್ನ ದೃಶ್ಯ ಅಭಿವ್ಯಕ್ತಿಯನ್ನು ಕಂಡುಕೊಂಡಿತು' ಎಂದು ಅವನು ಪ್ರತಿಪಾದಿಸುತ್ತಾನೆ.

ತೈಲ ವರ್ಣಚಿತಗಳು ಆಳುವ-ವರ್ಗದ ಐಡಿಯಾಲಜಿಯನ್ನು ಚಿತ್ರಿಸಲು ವಿಶೇಷವಾಗಿ ಸೂಕ್ತವಾದ ವಿಶಿಷ್ಟಲಕ್ಷಣಗಳನ್ನು ಹೊಂದಿದ್ದವು. ಬರ್ಗರ್ ಪ್ರಕಾರ, ತೈಲ ವರ್ಣಚಿತ್ರವು 'ಒಂದು ವಿಶೇಷ ಸಾಮರ್ಥ್ಯವನ್ನು ಹೊಂದಿದೆ. ಅದು ಯಾವುದನ್ನು ಚಿತ್ರಿಸುತ್ತೋ ಅದರ ಸ್ಪರ್ಶಗ್ರಾಹ್ಯತೆ, ಮೇಲ್ಮೈರಚನೆ, ಹೊಳಪು, ಸಮಗ್ರತೆ – ಇವೆಲ್ಲವನ್ನೂ ಚಿತ್ರದಲ್ಲಿ ಮೂಡಿಸಲು ಸಮರ್ಥವಾಗಿರುತ್ತದೆ. ನೀವು ಯಾವುದರ ಮೇಲೆ ನಿಮ್ಮ ಕೈಗಳನ್ನು ಇರಿಸಬಹುದೋ ಅದನ್ನು ನಿಜವೆಂದು ವ್ಯಾಖ್ಯಾನಿಸುತ್ತದೆ.' ಇದು ಮುಖ್ಯವಾಗಿತ್ತು ಏಕೆಂದರೆ ತೈಲ ವರ್ಣಚಿತ್ರಗಳು ಮೂಲತಃ ಸಂಪತ್ತು ಅಥವಾ ಆಸ್ತಿಯ ಚಿತ್ರಣಕ್ಕೆ ಸಂಬಂಧಿಸಿತ್ತು.

ತೈಲ ವರ್ಣಚಿತ್ರಕ್ಕೆ ಒಂದು ರೀತಿಯ ಮೂರ್ತಸ್ವರೂಪವನ್ನು ಸೃಷ್ಟಿಸಲು ಸಾಧ್ಯತೆಯಿರುವುದರಿಂದ ಆಳುವ-ವರ್ಗವು ತಮ್ಮ ವರ್ಣಚಿತ್ರಗಳಲ್ಲಿ ಕಾಣಬಯಸಿದ ಒಡೆತನದ ಭಾವಕ್ಕೆ ಅದು ಬೆಂಬಲ ನೀಡಿತು. ವರ್ಣಚಿತ್ರಗಳು ಯಾವಾಗಲೂ ಮೌಲ್ಯಯುತ ಸಂಗತಿಗಳನ್ನು ಚಿತ್ರಿಸಿದ್ದರೂ ಕೂಡ ಹಿಂದಿನ ಕಾಲದಲ್ಲಿ ಅವು ಸಾಮಾನ್ಯವಾಗಿ ಗಾಡ್ (God)ನ ಭವ್ಯತೆಗೆ ಸಂಬಂಧಿಸಿದ್ದವು. ಬಂಡವಾಳಶಾಹಿ ವ್ಯವಸ್ಥೆಯು ಬೆಳೆಯುತ್ತಾ ಹೋದಂತೆ, ಚಿತ್ರಕಲೆಯು, ರಿಲಿಜಿಯಸ್ ಪರಿಗಣನೆಗಳಿಗಿಂತ ಹಣವನ್ನೇ ಪ್ರಧಾನಗೊಳಿಸಿ ಆಳುವ ವರ್ಗದ ಸಂಪತ್ತು ಮತ್ತು ಅಧಿಕಾರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿತು. ಬರ್ಗರ್ ಹೇಳುವಂತೆ:

> ಹಿಂದಿನ ಸಂಪ್ರದಾಯಗಳಲ್ಲಿ ಕಲಾಕೃತಿಗಳು ಸಂಪತ್ತನ್ನು ವೈಭವೀಕರಿಸುತ್ತಿದ್ದವು. ಆದರೆ ಆಗ ಸಂಪತ್ತು ಎನ್ನುವುದು ಒಂದು ನಿಶ್ಚಿತವಾದ ಸಾಮಾಜಿಕ ಅಥವಾ ದೈವಿಕ ನಿಯಮದ ಸಂಕೇತವಾಗಿತ್ತು. ತೈಲ ವರ್ಣಚಿತ್ರವು ಚಲನಶೀಲವಾದ ಮತ್ತು ಹಣಕ್ಕಿದ್ದ ಅತ್ಯುನ್ನತ ಕೊಂಡುಕೊಳ್ಳುವ ಶಕ್ತಿಯ ಏಕೈಕ ಕಾರಣಕ್ಕೆ ಸ್ವೀಕಾರ ಪಡೆದುಕೊಂಡ ಹೊಸ ಸಂಪತ್ತನ್ನು ವೈಭವೀಕರಿಸಿತು. ಬರ್ಗರ್. 1972

ಬಹುಮಟ್ಟಿಗೆ ಆಳುವ ವರ್ಗವು ಮಾತ್ರ ಚಿತ್ರ ರಚನೆಯ ಕೆಲಸವನ್ನು ಕಲಾಕಾರರಿಗೆ ನಿಯೋಜಿಸುತ್ತಿದ್ದ ಒಂದೇ ಕಾರಣದಿಂದ ಅವರು ಲೋಕವನ್ನು ಕುರಿತ ತಮ್ಮದೇ ಆದ ದೃಷ್ಟಿಕೋನವನ್ನು ಹೇರಲು ಸಾಧ್ಯವಾಯಿತು. ಬಹಳಷ್ಟು ವರ್ಣಚಿತ್ರಗಳನ್ನು ಶ್ರೀಮಂತರು

**Commented [k8]:** As Lokadrushti for worldview has been maintained

**Commented [k9]:** Explanation at end as to why God and not devaru. As also religious

ಮಾತ್ರ ನಿಯೋಜಿಸುತ್ತಿದ್ದರು – ಅವುಗಳಲ್ಲಿ ಬಹಳಷ್ಟು ಸಾಧಾರಣ ಗುಣಮಟ್ಟದ್ದಾಗಿದ್ದವು. ತೈಲ ವರ್ಣಚಿತ್ರವನ್ನು ಕೊಂಡುಕೊಳ್ಳುವವರಿಗೆ ಅದರ ಉನ್ನತ ಗುಣಮಟ್ಟಕ್ಕಿಂತ ಹೆಚ್ಚಾಗಿ ಅವರು ಬಯಸಿದ ರೀತಿಯಲ್ಲೇ ಅವರನ್ನು ಮತ್ತು ಅವರ ಸಂಪತ್ತನ್ನು ಚಿತ್ರೀಕರಿಸುವುದು ಅವರಿಗೆ ಹೆಚ್ಚು ಮುಖ್ಯವಾದುದಾಗಿತ್ತು. ಬರ್ಗರ್ ಹೇಳುವಂತೆ: 'ಕಳಪೆ ಮತ್ತು ಸೃಜನಶೀಲವಲ್ಲದ ಕೆಲಸವು ಬೇಕಾಬಿಟ್ಟಿ ಮಾಡಿದುದರ ಅಥವಾ ಸಂಕುಚಿತ ಮನೋಭಾವದ ಪರಿಣಾಮವಾಗಿರಲಿಲ್ಲ; ಅದು ಕಲೆಗಿಂತ ಮಾರುಕಟ್ಟೆಯ ಅತ್ಯಂತ ಒತ್ತಾಯದ ಬೇಡಿಕೆಯ ಫಲವಾಗಿತ್ತು.'

**ಆಳುವ-ವರ್ಗದ ಕಲೆಯ ಉದಾಹರಣೆಗಳು**

ತನ್ನ ಪ್ರತಿಪಾದನೆಗಳನ್ನು ಸಚಿತ್ರವಾಗಿ ವಿವರಿಸಲು ಬರ್ಗರ್ ಸಾಕಷ್ಟು ಉದಾಹರಣೆಗಳನ್ನು ಕೊಡುತ್ತಾನೆ.

ಹಿಂದಿನ ಕಾಲದಲ್ಲಿ ಮೇರಿ ಮ್ಯಾಗ್ಡಲಿನ್ (Mary Magdalene)ಳ ಚಿತ್ರಗಳು ಅವಳ ಕಥೆಗೆ ಪ್ರಾಮುಖ್ಯತೆ ಕೊಡುವಲ್ಲಿ ಅವು ಒಲವು ತೋರಿದ್ದವು – 'ಅವಳು ಕ್ರಿಸ್ತನನ್ನು ಎಷ್ಟು ಪ್ರೀತಿಸುತ್ತಿದ್ದಳೆಂದರೆ ಅವಳು ತನ್ನ ಗತದ ಬಗ್ಗೆ ಪಶ್ಚಾತಾಪಪಟ್ಟಳು ಮತ್ತು ದೇಹದ ನಶ್ವರತೆಯನ್ನು ಹಾಗೂ ಸೋಲ್ (soul) ನ ಅಮರತ್ವವನ್ನು ಒಪ್ಪಿಕೊಂಡಿದ್ದಳು' ಎನ್ನುವಂತಹ ಕಥೆ. ಆದಾಗ್ಯೂ, ತೈಲ ವರ್ಣಚಿತ್ರಗಳು ಪ್ರಬಲವಾಗುತ್ತಿದ್ದ ಕಾಲದ ಹೊತ್ತಿಗೆ ಅವಳನ್ನು ಸಾಮಾನ್ಯವಾಗಿ ಚಿತ್ರಿಸುವ ಕ್ರಮವೇ ಬದಲಾಗಿತ್ತು. ಅವಳು ಈಗ ಗಂಡಸರ ಒಡೆತನದ ಒಬ್ಬ ಹೆಂಗಸಾಗಿ ಚಿತ್ರೀಕರಿಸಲ್ಪಡುತ್ತಿದ್ದಳು – ತನ್ನದಾಗಿಸಿಕೊಳ್ಳುವ ಒಂದು ಸ್ವತ್ತಾಗಿ ಮಾತ್ರ. 'ಅವಳು ಎಲ್ಲಕ್ಕಿಂತ ಮೊದಲು, ಮತ್ತೊಬ್ಬರು ಪಡೆಯಬಹುದಾದ ಮತ್ತು ಬಯಸಬಹುದಾದ ಒಬ್ಬ ಹೆಂಗಸಾಗಿ ಚಿತ್ರೀಕರಿಸಲ್ಪಟ್ಟಿದ್ದಳು' ಎಂದು ಬರ್ಗರ್ ಹೇಳುತ್ತಾನೆ.

Commented [k10]: Explanation why soul and not aatma

ಸ್ಟಿಲ್-ಲೈಫ್ (still-life) ಚಿತ್ರಣಗಳು ಸ್ಪಷ್ಟವಾಗಿ ಆಸ್ತಿ ಕುರಿತಾದ ಚಿತ್ರಗಳಾಗಿದ್ದವು. ಅವುಗಳನ್ನು ನಿಯೋಜಿಸಿದ್ದವರ ಶ್ರೀಮಂತ ಜೀವನಶೈಲಿಗೆ ಸಾಕ್ಷಿಯಾಗಿ ಸಂಪದ್ಭರಿತ ಆಹಾರ ಪದಾರ್ಥಗಳನ್ನು ಜೋಡಿಸಿಟ್ಟ ಮೇಜುಗಳಂತಹವುಗಳನ್ನು ಚಿತ್ರೀಕರಿಸಲು ಒಲವು ತೋರಿದವು.

ಪ್ರಾಣಿಗಳ ತೈಲ ವರ್ಣಚಿತ್ರಗಳೂ ಸಹ ಜನಪ್ರಿಯವಾಗಿದ್ದವು. ಆದಾಗ್ಯೂ, ಅವು ಸಾಮಾನ್ಯವಾಗಿ ಕಾಡುಪ್ರಾಣಿಗಳದ್ದಾಗಿರಲಿಲ್ಲ, ಬದಲಿಗೆ 'ಅವು ಸಾಕುಪ್ರಾಣಿಗಳದ್ದಾಗಿದ್ದು ಅವುಗಳು ಬೆಲೆಬಾಳುವಂತ ನಿರ್ದಿಷ್ಟ ತಳಿಗಳು ಎಂದು ಒತ್ತಿ ಹೇಳುವುದಕ್ಕೆ ಸಾಕ್ಷಿಯಾಗಿದ್ದವು.'

ಶ್ರೀಮಂತರ ಆಸ್ತಿಗಳನ್ನು ವೈಭವೀಕರಿಸಲೆಂದು ಭೂದೃಶ್ಯಗಳನ್ನು (landscapes) ಬಳಸಲಾಗಿತ್ತು. ಬರ್ಗರ್ ಗೇನ್ಸ್‌ಬರೊ (Gainsborough) ಚಿತ್ರಿಸಿದ *Mr and Mrs Andrews (ಮಿಸ್ಟರ್ ಆಂಡ್ ಮಿಸೆಸ್ ಆಂಡ್ರೂಸ್)* ಚಿತ್ರದ ಉದಾಹರಣೆಯನ್ನು ತೆಗೆದುಕೊಳ್ಳುತ್ತಾನೆ (ನೋಡಿ ಚಿತ್ರ 11.1). ಅವರ ಒಡೆತನಕ್ಕೆ ಸೇರಿದ ಭೂಮಿಯನ್ನು ಚಿತ್ರಿಸಿದ ಭೂದೃಶ್ಯದ

ವರ್ಣಚಿತ್ರದಲ್ಲಿ ತಾವೂ ಇರಬೇಕೆಂದು ಆಂಡ್ರೂಸ್ ದಂಪತಿಗಳು ಒತ್ತಾಯಿಸುತ್ತಾರೆ. ಬರ್ಗರ್‌ನ ಪ್ರಕಾರ, 'ಅವರು ಭೂಮಾಲೀಕರು ಮತ್ತು ಅವರನ್ನು ಸುತ್ತುವರೆದುದರ ಮೇಲೆ ಅವರಿಗಿರುವ ಒಡೆತನದ ಹಕ್ಕಿನ ಧೋರಣೆಯು ಅವರ ನಿಲುವಿನಲ್ಲಿ ಮತ್ತು ಅಭಿವ್ಯಕ್ತಿಗಳಲ್ಲಿ ಕಾಣಿಸುತ್ತಿತ್ತು.'

*ಚಿತ್ರ 11.1 ಮಿಸ್ಟರ್ ಆಂಡ್ ಮಿಸೆಸ್ ಆಂಡ್ರೂಸ್, ಗೇನ್ಸ್‌ಬರೊ, ಸಿ.1748–9, ನ್ಯಾಷನಲ್ ಗ್ಯಾಲರಿ, ಲಂಡನ್*

ಮೂಲ: ದಿ ಬ್ರಿಡ್ಜ್‌ಮೆನ್ ಆರ್ಟ್ ಲೈಬ್ರರಿ

**(ಸಮಾಜದ)ಕೆಳವರ್ಗದ ಜೀವನದ ವರ್ಣಚಿತ್ರಗಳು**

ಖಂಡಿತವಾಗಿ, ಎಲ್ಲಾ ತೈಲ ವರ್ಣಚಿತ್ರಗಳು ಶ್ರೀಮಂತರ ಆಸ್ತಿಯನ್ನು ಚಿತ್ರಿಸಲಿಲ್ಲ. ಆದಾಗ್ಯೂ, ಬಡವರನ್ನು ಚಿತ್ರಿಸಿದ ಕೆಲವು ವರ್ಣಚಿತ್ರಗಳು ಸಹ ಆಳುವ-ವರ್ಗದ ಐಡಿಯಾಲಜಿಗಳನ್ನೇ ಪ್ರತಿಬಿಂಬಿಸುತ್ತಿದ್ದವು. ತಂಗುದಾಣಗಳಲ್ಲಿನ 'ಕೆಳವರ್ಗ' ಗುಂಪುಗಳ ಭೋಗಲೋಲುಪತೆಯ ಜೀವನದ ಚಿತ್ರಗಳು 16ರಿಂದ 19ನೇ ಶತಮಾನದಲ್ಲಿ ಬೆಳೆಯುತ್ತಿರುವ ಮಧ್ಯಮ ವರ್ಗ (ಬೂರ್ಜ್ವಾ)ದವರಲ್ಲಿ ಜನಪ್ರಿಯತೆ ಹೊಂದಿತ್ತು. ಶ್ರೀಮಂತರು ತಮ್ಮ ಯಶಸ್ಸಿಗೆ ಹೇಗೆ ಅರ್ಹರಾಗಿದ್ದರು ಮತ್ತು ಅದೇ ಸಮಯದಲ್ಲಿ ಬಡವರ ದುರದೃಷ್ಟಕ್ಕೆ ಅವರೇ ಹೇಗೆ ಹೊಣೆಗಾರರಾಗಿರುತ್ತಾರೆ ಎಂಬ ನೈತಿಕ ಕಥೆಯೊಂದನ್ನು ಹೇಳುವುದು ಈ ವರ್ಣಚಿತ್ರಗಳ ಉದ್ದೇಶವಾಗಿತ್ತು. ಬರ್ಗರ್‌ನ ಪ್ರಕಾರ ಅಂತಹ ವರ್ಣಚಿತ್ರಗಳು 'ಪ್ರಾಮಾಣಿಕ ಹಾಗೂ ಕಷ್ಟಪಟ್ಟು ದುಡಿಯುವವರು ಏಳಿಗೆ ಹೊಂದುತ್ತಾರೆ, ಮತ್ತು ಯಾತಕ್ಕೂ ಪ್ರಯೋಜನಕ್ಕೆ ಬಾರದವರಿಗೆ ಅವರ ಯೋಗ್ಯತೆಗೆ ತಕ್ಕಂತೆ ಏನೂ ಇರಲಿಲ್ಲ ಎನ್ನುವ ಭಾವನಾತ್ಮಕ ಮಿಥ್ಯೆಯನ್ನು ಅದೇ ನಿಜವೆಂಬಂತೆ ತೋರಿಸುತ್ತಿತ್ತು.

**ರೆಂಬ್ರಾಂಟ್**

ಆಳುವ-ವರ್ಗದ ಐಡಿಯಾಲಜಿಯು ತೈಲ ವರ್ಣಚಿತ್ರದ ಮೇಲೆ ಪ್ರಭಾವ ಬೀರುವುದನ್ನು ಬರ್ಗರ್ ಒತ್ತಿ ಹೇಳಿದನಾದರೂ ಕೆಲವು ವರ್ಣಚಿತ್ರಗಳು ಬೂರ್ಜ್ವಾ ವರ್ಗದ ಸಂಕುಚಿತ ಕಾಳಜಿಗಳನ್ನು ಮೀರಿದ್ದವು ಎನ್ನುವುದನ್ನು ಅವನು ಒಪ್ಪಿಕೊಳ್ಳುತ್ತಾನೆ. ಆದಾಗ್ಯೂ, ಅಂತಹ

ಕೃತಿಗಳು ಅಪರೂಪ ಮತ್ತು ಪ್ರಪಂಚದ ಬಗ್ಗೆ ಯೋಚಿಸುವ ಪ್ರಬಲ ರೀತಿಗಳ ಹಿಡಿತದಿಂದ ಬಿಡಿಸಿಕೊಳ್ಳುವುದಕ್ಕೆ ಒದ್ದಾಡುತ್ತಿರುವವರು ಮಾತ್ರ ಅವುಗಳನ್ನು ಚಿತ್ರಿಸಲು ಸಾಧ್ಯ. ಬರ್ಗರ್‌ನ ಪ್ರಕಾರ ಈ ನಿಟ್ಟಿನಲ್ಲಿ ಯಶಸ್ವಿಯಾದ ಒಬ್ಬ ಚಿತ್ರಕಾರನೆಂದರೆ ಅದು ರೆಂಬ್ರಾಂಟ್ (Rembrandt).

ತನ್ನ ಆರಂಭಿಕ ವರ್ಣಚಿತ್ರಗಳಲ್ಲಿ ರೆಂಬಾರ್ಂಟ್ ಬೂರ್ಜ್ವಾ ವರ್ಗವು ವ್ಯಾಪಕಗೊಳಿಸಿದ ಪ್ರಧಾನ ಕಲಾ ಶೈಲಿಗೆ ಮಾರುಹೋಗಿದ್ದನು. ಆರಂಭಿಕ ಕಾಲದ ಸ್ವಚಿತ್ರದಲ್ಲಿ (ಚಿತ್ರ ೧೧.೨ ನೋಡಿ) ರೆಂಬ್ರಾಂಟ್ ತನ್ನ ಮೊದಲ ಪತ್ನಿಯ ಜೊತೆಗೆ ತನ್ನನ್ನು ಚಿತ್ರಿಸಿಕೊಂಡನು. ಅವನು ಮೂಲತಃ ಅವನ ಪತ್ನಿಯನ್ನು ಜಂಬದಿಂದ ಪ್ರದರ್ಶಿಸುತ್ತಿದ್ದನು, ಮತ್ತು, ಇದು ಬರ್ಗರ್‌ಗೆ, 'ಒಟ್ಟಾರೆಯಾಗಿ ಈ ವರ್ಣಚಿತ್ರವು ಅಲ್ಲಿ ಕುಳಿತಿರುವವನ ಒಳ್ಳೆಯ ಅದೃಷ್ಟ, ಘನತೆ ಮತ್ತು ಸಂಪತ್ತಿನ ಒಂದು ಜಾಹಿರಾತಿನಂತೆ' ಕಾಣಿಸಿತು.

ಮೂವತ್ತು ವರ್ಷಗಳ ನಂತರ, ಅವನಿಗೆ ವಯಸ್ಸಾದ ಕಾಲದಲ್ಲಿ, ಚಿತ್ರಿಸಿದ ಸ್ವಚಿತ್ರವು (ಚಿತ್ರ ೧೧.೩ ನೋಡಿ), ರೆಂಬ್ರಾಂಟ್‌ನು ಹೆಚ್ಚು ಗಂಭೀರವಾದ ಮತ್ತು ಭೌತಿಕ ಯಶಸ್ಸಿನ್ನು ಸೂಚಿಸುವ ಯಾವುದೇ ವೇಷಭೂಷಣ (trappings) ಇಲ್ಲದ ಚಿಂತನಾತ್ಮಕ ಭಾವಸ್ಥಿತಿಯಲ್ಲಿ ತನ್ನನ್ನು ಚಿತ್ರಿಸಿಕೊಳ್ಳುತ್ತಾನೆ. ಬರ್ಗರ್ ಹೇಳುವಂತೆ, 'ಅಸ್ತಿತ್ವ ಎಂಬುದರ ಅರ್ಥವೇನು, ಮತ್ತು ಅಸ್ತಿತ್ವವೇ ಒಂದು ಪ್ರಶ್ನೆಯಾಗಿರುವುದನ್ನು ಹೊರತುಪಡಿಸಿ ಅಲ್ಲಿ ಮತ್ತೇನೂ ಇರಲಿಲ್ಲ'. ರೆಂಬ್ರಾಂಟ್ ಆಳುವ-ವರ್ಗದ ಸಿದ್ಧಾಂತದ ಹಿಡಿತದಿಂದ ಕಳಚಿಕೊಳ್ಳುವಲ್ಲಿ ಮತ್ತು ಹೆಚ್ಚು ಸಾರ್ವತ್ರಿಕವಾದ ಮತ್ತು ಹೆಚ್ಚು ಕಾಲ ಬಾಳುವ ಮಹತ್ವವುಳ್ಳ ವರ್ಣಚಿತ್ರಗಳನ್ನು ಬಿಡಿಸುವಲ್ಲಿ ಯಶಸ್ವಿಯಾದನು.

### ಬರ್ಗರ್‌ನ ಮೌಲ್ಯಮಾಪನ

ತೈಲ ವರ್ಣಚಿತ್ರಗಳ ಬಗ್ಗೆ ಬರ್ಗರ್ ಒಂದು ಅಸಂಕೀರ್ಣವಾದ ಮತ್ತು ಅತೀ ಸರಳೀಕೃತಗೊಂಡ ವಿವರಣೆಯನ್ನು ಕೊಡುತ್ತಾನೆ ಎಂದು ಜ್ಯಾನೆಟ್ ವೋಲ್ಫ್ (Janet Wolff) (೧೯೮೧) ಪ್ರತಿಪಾದಿಸುತ್ತಾಳೆ. ಅವನ ಅಧ್ಯಯನವು 'ಒಂದು ಸಮರ್ಪಕವಾದ ಮತ್ತು ವ್ಯವಸ್ಥಿತವಾದ ವಿಶ್ಲೇಣೆಯ ಕೊರತೆಯನ್ನು ಹೊಂದಿದೆ' ಎಂದು ಅವಳು ಅಭಿಪ್ರಾಯಪಡುತ್ತಾಳೆ. ಆದಾಗ್ಯೂ, 'ಕಲಾ ಇತಿಹಾಸದ ಅಧ್ಯಯನ ಶಿಸ್ತಿನಲ್ಲಿ ಈ ಮಧ್ಯಪ್ರವೇಶವು ಅತ್ಯಂತ ಪರಿಣಾಮಕಾರಿ ಮತ್ತು ಪ್ರಭಾವಶಾಲಿಯಾಗಿದ್ದು ಇದು ಸಾಕಷ್ಟು ಮಟ್ಟಿಗೆ ವಿವರಣಾತ್ಮಕ ವಿಶ್ಲೇಷಣೆಯನ್ನು ಉತ್ತೇಜಿಸಿದೆ' ಎನ್ನುವುದನ್ನು ವೋಲ್ಫ್ ಒಪ್ಪಿಕೊಳ್ಳುತ್ತಾಳೆ. ಕಲೆ ಮತ್ತು ಸಾಹಿತ್ಯದ ಇತರ ಮಾರ್ಕ್ಸವಾದಿ ಸಿದ್ಧಾಂತಗಳು ಹೆಚ್ಚು ಕಡಮೆ ಇದೇ ದೃಷ್ಟಿಕೋನವನ್ನು ಹೊಂದಿವೆ, ಆದರೆ ಅವು ಬರ್ಗರ್ ಮಂಡಿಸಿದ ವಾದಗಳನ್ನು ಹೆಚ್ಚು ಸ್ಪಷ್ಟವಾಗಿ ಮಾಡಲು ಪ್ರಯತ್ನಿಸಿವೆ. ಲೂಸಿಯಾನ್ ಗೋಲ್ಡ್ಮೆನ್‌ನ (Lucien Goldmann) ಕೃತಿಯು ಇದಕ್ಕೆ ಒಂದು ಉದಾಹರಣೆಯಾಗಿದೆ.

## ಲೂಸಿಯಾನ್ ಗೋಲ್ಡ್ಮನ್ – ವರ್ಗ ಮತ್ತು ಸಾಹಿತ್ಯ

### ವರ್ಗ ಲೋಕದೃಷ್ಟಿಗಳ ಅಭಿವ್ಯಕ್ತಿ

ತನ್ನ ಪ್ರಸಿದ್ಧವಾದ *The Hidden God* *(ದಿ ಹಿಡನ್ ಗಾಡ್)* (1964) ಕೃತಿಯಲ್ಲಿ ಲೂಸಿಯಾನ್ ಪ್ರೆಂಚ್ ಲೇಖಕರುಗಳಾದ ಪ್ಯಾಸ್ಕೆಲ್ (Pascal) ಮತ್ತು ರೆಸೀನ್ (Racine) ಅವರ ಬಗ್ಗೆ ಒಂದು ಸಮಾಜಶಾಸ್ತ್ರೀಯ ವಿವರಣೆಯನ್ನು ಗೋಲ್ಡ್ಮನ್ ಅಭಿವೃದ್ಧಿ ಪಡಿಸಿದ್ದಾನೆ. ಬರ್ಗರ್ ಹೇಳಿದಂತೆ ಕಲಾತ್ಮಕ ಸೃಷ್ಟಿಗಳು ಆಳುವ-ವರ್ಗದ ಐಡಿಯಾಲಜಿಯನ್ನು ಸರಳವಾದ ರೀತಿಯಲ್ಲಿ ಪ್ರತಿಬಿಂಬಿಸುವ ಪ್ರವೃತ್ತಿಯನ್ನು ಹೊಂದಿರುತ್ತವೆ ಎನ್ನುವುದನ್ನು ಲೂಸಿಯಾನ್ ನಂಬುವುದಿಲ್ಲ. ಬದಲಿಗೆ, ಕಲಾಕೃತಿಗಳು (ಇಲ್ಲಿನ ಸಂದರ್ಭದಲ್ಲಿ ಸಾಹಿತ್ಯದ ಶ್ರೇಷ್ಠ ಕೃತಿಗಳು) ನಿರ್ದಿಷ್ಟವಾದ ಸಾಮಾಜಿಕ ವರ್ಗಗಳ ಲೋಕದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ ಎಂದು ಅವನು ವಾದಿಸುತ್ತಾನೆ. ಅವನು ಹೇಳುವಂತೆ: 'ಭೌದ್ಧಿಕ ಮತ್ತು ಕಲಾತ್ಮಕ ಚಟುವಟಿಕೆ ಮತ್ತು ಸೃಷ್ಟಿಯ ದೃಷ್ಟಿಯಿಂದ ಯಾವುದೇ ವ್ಯಕ್ತಿಯು ಸೇರಿರುವಂತಹ ಅತ್ಯಂತ ಮಹತ್ವದ ಗುಂಪು, ಒಂದು ಸಮಾಜಿಕ ಗುಂಪೇ ಆಗಿರುತ್ತದೆ, ಅಥವಾ ಅವನು ಸದಸ್ಯನಾಗಿರುವ ಗುಂಪಾಗಿರುತ್ತದೆ'. ಅಧೀನಕ್ಕೊಳಪಟ್ಟಿರುವ ವರ್ಗಗಳ ಜನರು ತಮ್ಮ ಸಾಕಷ್ಟು ಶ್ರಮವನ್ನು ಭೌತಿಕ ಅಸ್ತಿತ್ವವನ್ನು ಕಪಾಡಿಕೊಂಡು ಬರುವುದಕ್ಕೆ ವ್ಯಯಿಸಬೇಕಾಗುತ್ತದೆ, ಹಾಗೆ ಪ್ರಬಲ ವರ್ಗದವರು ತಮ್ಮ ಸಮಯವನ್ನು ತಮ್ಮ ಪ್ರಾಬಲ್ಯವನ್ನು ಉಳಿಸಿಕೊಂಡು ಬರಲು ಮೀಸಲಿಡಬೇಕಾಗುತ್ತದೆ ಎಂದು ಹೇಳುವ ಮೂಲಕ ಅವನು ತನ್ನ ಪ್ರತಿಪಾದನೆಯನ್ನು ಸಮರ್ಥಿಸಿಕೊಳ್ಳುತ್ತಾನೆ. ಹಾಗಾಗಿ, ಜಗತ್ತನ್ನು ಕುರಿತು ಜನರಿಗಿರುವ ಚಿಂತನೆಗಳಲ್ಲಿ ವರ್ಗವು ಪ್ರಧಾನವಾಗಿರುತ್ತದೆ.

*ಚಿತ್ರ 11.2 ಶಸ್ಕಿಯಾ ಜೊತೆಯಲ್ಲಿ ಸ್ವಚಿತ್ರ, ರೆಂಬ್ರಾಂಟ್, ಚಿ. 1635, ಜಿಮಾಲ್ಡಿಗ್ಯಾಲರಿ, ಡ್ರೆಸ್ಡೆನ್*

ಮೂಲ: ದಿ ಬ್ರಿಡ್ಜ್‌ಮೆನ್ ಆರ್ಟ್ ಲೈಬ್ರರಿ

*ಚಿತ್ರ 11.3 ವಯಸ್ಸಾದವನಂತೆ ಸ್ವಚಿತ್ರ, ರೆಂಬ್ರಾಂಟ್, ಚಿ. 1664, ಗಲ್ಲೆರಿಯಾ ಡೆ ಯುಫಿಜಿ, ಫ್ಲೋರೆನ್ಸ್*

ಮೂಲ: ದಿ ಬ್ರಿಡ್ಜ್‌ಮೆನ್ ಆರ್ಟ್ ಲೈಬ್ರರಿ

ಗೋಲ್ಡ್‌ಮನ್‌ನ ಪ್ರಕಾರ  ಹೆಚ್ಚಿನ ಜನರು ಅಸಂಬದ್ಧ ಮತ್ತು ಭಾಗಶಃ ವರ್ಗಪ್ರಜ್ಞೆಯನ್ನು ಮಾತ್ರ ಹೊಂದಿರುತ್ತಾರೆ. ಆದಾಗ್ಯೂ, ಕೆಲವು ವ್ಯಕ್ತಿಗಳು ಇದಕ್ಕಿಂತ ಹೆಚ್ಚಿನ ಗ್ರಹಿಕೆಯನ್ನು ಹೊಂದಿರುತ್ತಾರೆ. ಅವರುಗಳೆಂದರೆ:

> ತಾವು ಸೇರಿರುವ ಸಾಮಾಜಿಕ ವರ್ಗದ ಬಗ್ಗೆ ಒಂದು ಸಂಪೂರ್ಣವಾದ ಸಮಗ್ರ ಮತ್ತು ಸುಸಂಗತರವಾದ ದೃಷಿಕೋನವನ್ನು ವಾಸ್ತವವಾಗಿ ತಳೆದಿರುವವರು ಅಥವಾ ಹಾಗೆ ತಾಳುವ ಸಮೀಪಕ್ಕೆ ಬಂದಿರುವ ವಿಶಿಷ್ಟವಾದ ವ್ಯಕ್ತಿಗಳು. ಈ ಸೂಕ್ಷ್ಮ ಅಂತರ್ದೃಷ್ಟಿಯನ್ನು (vision) ಕಾಲ್ಪನಿಕವಾಗಿ ಅಥವಾ ಪರಿಕಲ್ಪನಾತ್ಮಕವಾದ ಮಟ್ಟದಲ್ಲಿ ಅಭಿವ್ಯಕ್ತಗೊಳಿಸುವವರು ಬರಹಗಾರರು ಮತ್ತು ತತ್ವಶಾಸ್ತ್ರಜ್ಞರಾಗಿರುತ್ತಾರೆ.
> ಗೋಲ್ಡ್‌ಮನ್, 1964

## ಪ್ಯಾಸ್ಕೆಲ್ ಮತ್ತು ರೆಸೀನ್

ಪ್ಯಾಸ್ಕೆಲ್ ಮತ್ತು ರೆಸೀನ್‌ರವರಲ್ಲಿ ಗೋಲ್ಡ್‌ಮನ್ ಇಂತಹ ಅಸಾಧಾರಣ ವ್ಯಕ್ತಿಗಳನ್ನು ಕಾಣುತ್ತಾನೆ. ಹದಿನೇಳನೇ ಶತಮಾನದಲ್ಲಿ ಫ್ರೆಂಚ್ ಸಮಾಜದಲ್ಲಿ ಒಂದು ನಿರ್ದಿಷ್ಟ ವರ್ಗದ ಗುಂಪಿನ ಸ್ಥಾನವನ್ನು ಬಿಂಬಿಸುವ ಪ್ರಪಂಚದ **ದುರಂತ ಸೂಕ್ಷ್ಮ ಅಂತರ್ದೃಷ್ಟಿ (tragic vision) ಯನ್ನು** ಅವರು ಹೊಂದಿದ್ದರು  ಎಂದು ಅವನು ವಾದಿಸುತ್ತಾನೆ. ಗೋಲ್ಡ್‌ಮನ್ ಈ ವರ್ಗವನ್ನು *ನೋಬ್ಲೆಸ್ ದಿ ರೋಬ್ (noblesse de robe)* ಎಂದು ಉಲ್ಲೇಖಿಸುತ್ತಾನೆ.

*ನೋಬ್ಲೆಸ್ ದಿ ರೋಬ್* ವರ್ಗವು ಕಾನೂನು ಮತ್ತು ಆಡಳಿತಾತ್ಮಕ ವೃತ್ತಿಯಲ್ಲಿದ್ದವರನ್ನು ಒಳಗೊಂಡಿತ್ತು. ಇವರನ್ನು ರಾಜಪ್ರಭುತ್ವವು ನೇರವಾಗಿ ನೇಮಕ ಮಾಡಿಕೊಂಡಿರಲಿಲ್ಲವಾದರೂ ಅವರು ಭಾಗಶಃ ರಾಜಪ್ರಭುತ್ವದ ನಿಯಂತ್ರಣದಲ್ಲಿದ್ದ ಪ್ರಭುತ್ವದ ಭಾಗವಾಗಿದ್ದರು. ಹಾಗಾಗಿ *ನೋಬ್ಲೆಸ್ ದಿ ರೋಬ್*ನ ಲೋಕದೃಷ್ಟಿಯು ಭಾಗಶಃ ರಾಜಪ್ರಭುತ್ವದ ಲೋಕದೃಷ್ಟಿಯನ್ನೇ ಪ್ರತಿಬಿಂಬಿಸುವ ಸಾಧ್ಯತೆ ಇತ್ತು.

ಆದಾಗ್ಯೂ, ಅವರು ನಿರ್ವಹಿಸಿದ ಹಲವು ಬಗೆಯ ಕಾರ್ಯಗಳು – ಉದಾಹರಣೆಗೆ, ಕಾನೂನು ವೃತ್ತಿ – ಅವರನ್ನು ಒಂದು ವಿಭಿನ್ನವಾದ ಲೋಕದೃಷ್ಟಿಯತ್ತ ಒಲವು ತೋರುವಂತೆ ಮಾಡಿತು. ಈ ಲೋಕದೃಷ್ಟಿಯು ರಾಜಪ್ರಭುತ್ವದ ಸಾಂಪ್ರದಾಯಿಕ ಅಧಿಕಾರವನ್ನು ಒಪ್ಪಿಕೊಳ್ಳಲು ಒಲವು ತೋರದ ಹೆಚ್ಚು ವೈಚಾರಿಕವಾದದ್ದಾಗಿತ್ತು. ಆದ್ದರಿಂದ ಅವರ ಲೋಕದೃಷ್ಟಿಯು ರಾಜಪ್ರಭುತ್ವ ಮತ್ತು ಹೆಚ್ಚು ವೈಚಾರಿಕ ದೃಷ್ಟಿಕೋನವನ್ನು ಹೊಂದಿದ್ದ ಆಗಷ್ಟೇ ಹುಟ್ಟಿಕೊಳ್ಳುತ್ತಿದ್ದ ಬೂರ್ಜ್ವಾ – ಇವರೆಡರ ವಿಶಿಷ್ಟವಾದ ವಿರೋಧಾತ್ಮಕ ಅಂಶಗಳನ್ನು ಒಳಗೊಂಡಿತ್ತು. ಗೋಲ್ಡ್ಮನ್‌ನ ಪ್ರಕಾರ, ಈ ವೈರುಧ್ಯಪೂರ್ಣ ಐಡಿಯಾಲಜಿಯು ಪ್ಯಾಸ್ಕೆಲ್ ಮತ್ತು ರೆಸೀನ್ ಅವರು ಬರೆದ ದುರಂತ ಸಾಹಿತ್ಯಗಳಲ್ಲಿ ಪ್ರತಿಬಿಂಬಿತವಾಗಿತ್ತು.

'ಗಾಡ್‌ನ ಪ್ರತಿಯೊಂದು ಒತ್ತಾಯಗಳು ಈ ಜಗತ್ತಿನ ದೃಷ್ಟಿಯಿಂದ ಅಸಾಧ್ಯವಾದುದಾಗಿದೆ ಮತ್ತು ಈ ಜಗತ್ತಿನ ನಿಯಮಗಳನ್ನು ಪಾಲಿಸಿದಾಗ ಯಾವುದೆಲ್ಲ ಸಾಧ್ಯವಾಗುತ್ತದೆಯೊ ಅವೆಲ್ಲವೂ ಗಾಡ್‌ನ ದೃಷ್ಟಿ ಬಿದ್ದ ತಕ್ಷಣವೇ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ' ಎನ್ನುವುದು ಈ ದುರಂತ ಸಾಹಿತ್ಯಗಳ ಕೇಂದ್ರ ಅಂಶವಾಗಿತ್ತು. ಸಂಕ್ಷಿಪ್ತಗೊಳಿಸುವುದಾದರೆ, ಈ ಜಗತ್ತಿನಲ್ಲಿ ಯಶಸ್ಸನ್ನು ಗಳಿಸುವುದು ಮತ್ತು ಅದೇ ಸಮಯದಲ್ಲಿ ಗಾಡ್‌ನನ್ನು ಮೆಚ್ಚಿಸುವುದು ಅಸಾಧ್ಯವಾದುದಾಗಿತ್ತು. ಬೂರ್ಜ್ವಾಸಿಯ ಸದಸ್ಯರಾಗಿರುವುದು ಮತ್ತು ಅದೇ ಸಮಯದಲ್ಲಿ ರಾಜಪ್ರಭುತ್ವವನ್ನು ಸಂತುಷ್ಟಗೊಳಿಸುವುದು ಅಸಾಧ್ಯವಾದುದು ಎನ್ನುವುದನ್ನು ಇದು ಪ್ರತಿಬಿಂಬಿಸುತ್ತಿತ್ತು. ಹಾಗಾಗಿ, ಪ್ಯಾಸ್ಕೆಲ್ ಮತ್ತು ರೆಸೀನ್‌ರ ಸಾಹಿತ್ಯವು *ನೋಬ್ಲೆಸ್ ದಿ ರೋಬ್* ರ ವರ್ಗದ ಸ್ಥಾನದ ವೈರುಧ್ಯಗಳನ್ನು ನೇರವಾಗಿ ಪ್ರತಿಬಿಂಬಿಸುತ್ತಿತ್ತು ಮತ್ತು ಅಭಿವ್ಯಕ್ತಿಗೊಳಿಸುತ್ತಿತ್ತು.

**ಗೋಲ್ಡ್ಮನ್‌ನ ಮೌಲ್ಯಮಾಪನ**

ಜ್ಯಾನೆಟ್ ವೋಲ್ಫ್ (Janet Wolff)ರವರು ಗೋಲ್ಡ್ಮನ್ ಸಾಹಿತ್ಯಕ್ಕೆ ಒಂದು ಸಾಪೇಕ್ಷವಾದ ಸಂಕೀರ್ಣ ಮತ್ತು ಸೂಕ್ಷ್ಮವಾದ ಮಾರ್ಕ್ಸ್‌ವಾದಿ ಅರ್ಥ ವಿವರಣೆಗಳನ್ನು ಒದಗಿಸಿದ್ದಾರೆ ಎಂದು ವಾದಿಸುತ್ತಾಳೆ. ಅವಳು ಹೇಳುವಂತೆ:

> ಅವನು ಒಂದು ಅಸಂಕೀರ್ಣವಾದ ಸರಳೀಕರಣಕಾರ ಸಮೀಕರಣವನ್ನು ಬಳಸದೇ ವರ್ಗ ರಚನೆಯೊಂದಿಗೆ ಸಾಹಿತ್ಯ ಮತ್ತು ಐಡಿಯಾಲಜಿಗಿರುವ ಸಂಬಂಧವನ್ನು ತೋರಿಸುತ್ತಾನೆ ಮತ್ತು ಸಾಮಾಜಿಕ ಬದುಕು ಎನ್ನುವುದು ಸಮಗ್ರವಾದುದು ಎನ್ನುವುದನ್ನು ಒತ್ತಿ ಹೇಳುತ್ತಾನೆ. ಸಾಹಿತ್ಯಕ ಸೃಷ್ಟಿಯ ನಡುವಿನ ಸಂಬಂಧವನ್ನು ಕಾರ್ಯಾಕಾರಣ ಅಥವಾ ಅಸ್ಪಷ್ಟವಾಗಿ ಪೂರ್ವನಿರ್ಧರಿತವೆಂದು ವ್ಯಾಖ್ಯಾನಿಸಲಾಗಿಲ್ಲ, ಬದಲಿಗೆ ಅದನ್ನು ಸಮಾಜಿಕ ಗುಂಪುಗಳು ಮತ್ತು ಅವುಗಳ ಪ್ರಜ್ಞೆಯ ಮೂಲಕ ಮೂಡಿರುತ್ತದೆ ಎಂದು ಮಂಡಿಸಲಾಗಿದೆ. ವೋಲ್ಫ್, 1981

ಇತರರು ಕೇವಲ ಆಂಶಿಕವಾಗಿ ಮಾತ್ರ ಗ್ರಹಿಸಲು ಸಾಧ್ಯವಾದ ವರ್ಗಪ್ರಜ್ಞೆಯನ್ನು ವ್ಯಕ್ತಪಡಿಸಲು ಸಾಧ್ಯವಾಗುವ ಅಸಾಮಾನ್ಯ ವ್ಯಕ್ತಿಗಳ ಹೊಳಹನ್ನು ಗೋಲ್ಡ್ಮನ್ ಬಳಸುತ್ತಾನೆ

ಎನ್ನುವುದನ್ನು ವೋಲ್ಫ್ ಗುರುತಿಸುತ್ತಾಳೆ. ವೋಲ್ಫ್ ಪ್ರಕಾರ ಬರ್ಗರ್‌ನ ನಿಯತಿ ವಾದವನ್ನು ಒಳಗೊಂಡ (deterministic) ದೃಷ್ಟಿಕೋನಕ್ಕಿಂತ ಇದು ಸಾಕಷ್ಟು ಮುನ್ನಡೆ ಸಾಧಿಸಿದೆ.

ಆದಾಗ್ಯೂ, ಗೋಲ್ಡ್‌ಮನ್‌ನ ಕೃತಿಯು ಟೀಕೆಗಳಿಂದ ಹೊರತಾಗಿಲ್ಲ ಮತ್ತು ಹಲವಾರು ದೃಷ್ಟೀಕೋನಗಳಿಂದ ಇದು ಅಸಮರ್ಪಕವಾಗಿ ಕಾಣಿಸುತ್ತದೆ.

1. ಇದು ಯಾವುದೇ ಪ್ರಬಲ ಸಮರ್ಥನೆಯನ್ನು ನೀಡದೆ ಅನುಭವವನ್ನು ರೂಪಿಸುವಲ್ಲಿ ವರ್ಗವು ಪ್ರಧಾನ ಪಾತ್ರ ವಹಿಸುತ್ತದೆ ಎಂಬ ಗೃಹೀತವನ್ನು ಹೊಂದಿದೆ. ಉದಾಹರಣೆಗೆ, ಸ್ತ್ರೀವಾದಿಗಳ ಪ್ರಕಾರ ಕಲೆಯ ಮೇಲೆ ಪ್ರಭಾವ ಬೀರುವಲ್ಲಿ ವರ್ಗಕ್ಕಿಂತ ಲಿಂಗತ್ವವು ಪ್ರಮುಖ ಪಾತ್ರ ವಹಿಸುತ್ತದೆ. ಜನಾಂಗೀಯ ಗುಂಪುಗಳು ಮತ್ತು ವಯಸ್ಸಿನ ಗುಂಪುಗಳಂತಹ ಇತರ ಸಾಮಾಜಿಕ ಗುಂಪುಗಳೂ ಸಹ ಸಾಹಿತ್ಯ ಮತ್ತು ಇತರ ಕಲಾ ಪ್ರಕಾರಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ.
೨. ವರ್ಗವು ತನ್ನದೇ ಒಂದು ಐಡಿಯಾಲಜಿಯನ್ನು ಹೊಂದಲು ಸಾಧ್ಯ, ವ್ಯಕ್ತಿಗಳಿಗೆ ವಿಶ್ವದ ಬಗ್ಗೆ ಒಂದು ಸುಸಂಬದ್ಧವಾದ ಮತ್ತು ನಿರಂತರವಾಗಿರುವ ದೃಷ್ಟಿಕೋನವನ್ನು ಅಭಿವೃದ್ಧಿಪಡಿಸಲು ಸಾಧ್ಯ, ಮತ್ತು ಒಂದು ಪಠ್ಯವನ್ನು ವ್ಯಾಖ್ಯಾನಿಸುವವರಿಗೆ ಅದರ ಅರ್ಥ ಸ್ಪಷ್ಟವಾಗಿರುವುದು ಸಾಧ್ಯ ಎಂಬ ಗೃಹೀತಗಳನ್ನು ಗೋಲ್ಡ್‌ಮನ್‌ನ ಕೃತಿಯು ಹೊಂದಿದೆ. ಈ ಎಲ್ಲ ಪ್ರತಿಪಾದನೆಗಳನ್ನೂ ಅಂತಹ ಸರಳವಾದ ಗೃಹೀತಗಳ ಬಗ್ಗೆ ವಿಮರ್ಶಾತ್ಮಕವಾಗಿರುವ ವಿವಿಧ ರಾಚನಿಕೋತ್ತರವಾದಿಗಳು ಮತ್ತು ಆಧುನಿಕೋತ್ತರವಾದಿಗಳು ಪ್ರಶ್ನಿಸಿದ್ದಾರೆ.
೩. ಪ್ರತಿಯೊಬ್ಬ ಲೇಖಕರಿಗೆ ಸ್ವಾಯತ್ತತೆಯನ್ನು ಗೋಲ್ಡ್‌ಮನ್ ಆರೋಪಿಸಿದ ಹೊರತಾಗಿಯೂ ಸಹ ಅವನು ಸಾಹಿತ್ಯದ ಬಗ್ಗೆ ಒಂದು ಏಕಕಾರಣಾತ್ಮಕ (monocausal) ವಿವರಣೆಯನ್ನೇ ಕೊಡುತ್ತಾನೆ. ಒಂದು ನಿರ್ದಿಷ್ಟ ವರ್ಗದ ಲೋಕದೃಷ್ಟಿಯ ಅಭಿವ್ಯಕ್ತಿಯಂತಹ ಒಂದೇ ಒಂದು ಅಂಶವು ಸಾಹಿತ್ಯದಂತಹ ಕಲಾ ಪ್ರಕಾರಗಳ ಅಡಕಾಂಶಗಳನ್ನು ವಿವರಿಸಲು ಸಾಧ್ಯವೇ ಎನ್ನುವುದು ಸಂದೇಹಾಸ್ಪದವಾದುದಾಗಿದೆ.

ಈ ಅಧ್ಯಾಯವು ಮುಂದುವರೆದಂತೆ ಸಂಸ್ಕೃತಿಯ ಮೇಲಿನ ಇತರೆ ಪ್ರಭಾವಗಳ ವ್ಯಾಪ್ತಿಯನ್ನು ಚರ್ಚಿಸಲಾಗುವುದು.

## ಸಂಸ್ಕೃತಿಯ ಕುರಿತು ನವ-ಮಾರ್ಕ್ಸ್‌ವಾದಿ ಸಿದ್ಧಾಂತಗಳು

ಬಹಳಷ್ಟು ಬರಹಗಾರರು ಸಂಸ್ಕೃತಿಯ ಹೊಸ ಅಥವಾ ನವ-ಮಾರ್ಕ್ಸ್‌ವಾದಿ ಸಿದ್ಧಾಂತಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಎಲ್ಲಾ ದೃಷ್ಟಿಕೋನಗಳು ಮಾರ್ಕ್ಸ್‌ವಾದದಿಂದ ಗಮನಾರ್ಹವಾಗಿ ಪ್ರಭಾವಿತಗೊಂಡಿವೆ. ಆದರೆ ಸಂಸ್ಕೃತಿಯು ಗಣನೀಯ ಸ್ವಾಯತ್ತತೆ ಹೊಂದಿರುತ್ತದೆ ಅಥವಾ ಆರ್ಥಿಕ ಪ್ರಭಾವಗಳಿಂದ ಮುಕ್ತವಾಗಿರುತ್ತದೆ, ಮತ್ತು ವರ್ಗ ಮತ್ತು ಸಂಸ್ಕೃತಿಗಳ ನಡುವೆ ಯಾವುದೇ ಸ್ಪಷ್ಟವಾದ ಪರಸ್ಪರ ಸಂಬಂಧವಿಲ್ಲ ಎಂದು ವಾದಿಸುವತ್ತ ಎಲ್ಲರೂ ಒಲವು ತೋರುತ್ತಾರೆ.

**ರೇಮೆಂಡ್ ವಿಲಿಯಮ್ಸ್ – ಸಂಸ್ಕೃತಿ ಮತ್ತು ಸಮಾಜ**

ಬ್ರಿಟನ್ನಿನಲ್ಲಿ ಸಂಸ್ಕೃತಿ ಕುರಿತಾದ ಅಧ್ಯಯನವನ್ನು ಅಭಿವೃದ್ಧಿ ಪಡಿಸಿದವರಲ್ಲಿ ರೇಮೆಂಡ್ ವಿಲಿಯಮ್ಸ್ (Raymond Williams) ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿದ್ದಾನೆ. ಪ್ರಮುಖ ಗ್ರಂಥಗಳ ಸರಣಿಯಲ್ಲಿ ವಿಲಿಯಮ್ಸ್ (1961, 1965, 1978) ತನ್ನ ಚಿಂತನೆಯನ್ನು ಬೆಳೆಸಲು ಮಾರ್ಕ್ಸ್‌ವಾದಿ ಸಿದ್ಧಾಂತಗಳ ಕೆಲವು ಅಂಶಗಳನ್ನು ಬಳಸಿಕೊಂಡು ಸಮಾಜ, ಸಂಸ್ಕೃತಿ ಮತ್ತು ಕಲೆಯ ನಡುವಣ ಸಂಬಂಧವನ್ನು ಅವನು ಪರಿಶೀಲನೆ ಮಾಡುತ್ತಾನೆ.

**ವರ್ಗ ಪ್ರಜ್ಞೆ ಮತ್ತು ಸಂಸ್ಕೃತಿ**

ತನ್ನ *Culture and Society (ಕಲ್ಚರ್ ಆಂಡ್ ಸೊಸೈಟಿ)* (1961) ಕೃತಿಯಲ್ಲಿ ಸಂಸ್ಕೃತಿಯ ಮಾರ್ಕ್ಸ್‌ವಾದಿ ಸಿದ್ಧಾಂತಗಳ ಎರಡು ಪ್ರಮುಖ ಅಂಶಗಳನ್ನು ವಿಲಿಯಮ್ಸ್ ಪ್ರಶ್ನಿಸುತ್ತಾನೆ.

ಮೊದಲಿಗೆ, ಅವನು ಮೂಲರಚನೆ ಮತ್ತು ಮೇಲ್‌ರಚನೆಗಳ ಪರಿಕಲ್ಪನೆಗಳ ಬಳಕೆಯು ನಮ್ಮನ್ನು ತಪ್ಪು ದಾರಿಗೆ ಎಳೆಯುತ್ತಿದೆ ಎಂದು ವಾದಿಸುತ್ತಾನೆ. ‘ಒಂದು ಸಾದೃಶ್ಯದ ಪರಿಭಾಷೆಯಲ್ಲಿ ರಚನೆ ಮತ್ತು ಮೇಲ್‌ರಚನೆಗಳು, ಏಕಕಾಲದಲ್ಲಿ ನಿರುಪಾಧಿಕ ಮತ್ತು ಸ್ಥಿರ ಸಂಬಂಧವನ್ನು ವ್ಯಕ್ತಗೊಳಿಸುತ್ತವೆ. ಆದರೆ ಮಾರ್ಕ್ಸ್ ಮತ್ತು ಏಂಗಲ್ಸ್ ಗುರುತಿಸುವ ವಾಸ್ತವವು ಅಷ್ಟೇನೂ ನಿರುಪಾಧಿಕ ಮತ್ತು ಸ್ಪಷ್ಟತೆ ಇವೆರಡೂ ಲಕ್ಷಣಗಳನ್ನು ಹೊಂದಿಲ್ಲ’ ಎಂದು ಅವನು ಹೇಳುತ್ತಾನೆ. ಆರ್ಥಿಕ ಅಂಶಗಳು ಸಂಸ್ಕೃತಿಯನ್ನು ಪ್ರಭಾವಿಸುತ್ತವೆ ಎನ್ನುವುದನ್ನು ವಿಲಿಯಮ್ಸ್ ಅಲ್ಲಗಳೆಯುವುದಿಲ್ಲ, ಆದರೆ ಅವು ಸಂಸ್ಕೃತಿಯನ್ನು ನಿರ್ಧರಿಸುವಲ್ಲಿ ನೇರವಾದ ಪಾತ್ರವನ್ನು ವಹಿಸುತ್ತವೆ ಎನ್ನುವುದನ್ನು ಅವನು ಅಲ್ಲಗಳೆಯುತ್ತಾನೆ. ಅವನು ಹೇಳುವಂತೆ:

> ಸಂಸ್ಕೃತಿಯ ಮಾರ್ಕ್ಸ್‌ವಾದಿ ಸಿದ್ಧಾಂತವು ವೈವಿಧ್ಯತೆ ಮತ್ತು ಸಂಕೀರ್ಣತೆಯನ್ನು ಗುರುತಿಸುತ್ತದೆ, ಬದಲಾವಣೆಯೊಳಗೆ ನಿರಂತರತೆಯನ್ನು ಅದು ಗಣನೆಗೆ ತೆಗೆದುಕೊಳ್ಳುತ್ತದೆ, ಆಕಸ್ಮಿಕಗಳು ಹಾಗೂ ಕೆಲವು ನಿರ್ದಿಷ್ಟ ಬಗೆಯ ಸ್ವಾಯತ್ತತೆಗೆ ಅನುವು ಮಾಡಿಕೊಡುತ್ತದೆ, ಆದರೆ ಇವುಗಳನ್ನು ಗಣನೆಗೆ ತೆಗೆದುಕೊಳ್ಳುವುದರೊಂದಿಗೆ ಆರ್ಥಿಕ ರಚನೆಯ ಸಂಗತಿಗಳು ಮತ್ತು ಅದರ ಪರಿಣಾಮವಾದ ಸಾಮಾಜಿಕ ಸಂಬಂಧಗಳನ್ನು ತೆಗೆದುಕೊಂಡು ಅವುಗಳ ಆಧಾರದ ಮೇಲೆ ಸಂಸ್ಕೃತಿಯನ್ನು ಕಟ್ಟಲಾಗಿದೆ. ವಿಲಿಯಮ್ಸ್, 1961

ವಿಲಿಯಮ್ಸ್‌ನ ಕೃತಿಯಲ್ಲಿ ಐತಿಹಾಸಿಕ ವಿವರಗಳು ಮತ್ತು ವ್ಯಕ್ತಿಗತ ಹಾಗೂ ಗುಂಪುಗಳ ಸೃಜನಶೀಲತೆಗೆ ಕೆಲವು ಮಾರ್ಕ್ಸ್‌ವಾದಿ ಸಿದ್ಧಾಂತಗಳಿಗಿಂತ ಹೆಚ್ಚು ಅವಕಾಶವಿದೆ.

ಎರಡನೆಯದಾಗಿ, ಸಂಸ್ಕೃತಿಯ ಕುರಿತ ಮಾರ್ಕ್ಸ್‌ವಾದಿ ಸಿದ್ಧಾಂತಗಳು ಕಲೆ ಮತ್ತು ಸಾಹಿತ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಾರೆ ಎಂದು ವಿಲಿಯಮ್ಸ್ ವಾದಿಸುತ್ತಾನೆ. ಮೂಲತಃ

ಅವರು ಅತ್ಯಂತ ಸಂಕುಚಿತ ದೃಷ್ಟಿಯನ್ನು ಹೊಂದಿದ್ದರು. ವಿಲಿಯಮ್ಸ್ ಪ್ರಕಾರ ಮಾರ್ಕ್ಸ್‌ವಾದಿ ಸಿದ್ಧಾಂತವು ಸಾಮಾಜಿಕ ನೈಜತೆಯ ಎಲ್ಲ ಅಂಶಗಳ ಪರಸ್ಪರ ಅವಲಂಬನೆಯನ್ನು ಎತ್ತಿಹಿಡಿಯುತ್ತದೆ, ಮತ್ತು ಕಲೆ ಮತ್ತು ಸಾಹಿತ್ಯದಂತಹ ಸಂಕುಚಿತ ಕ್ಷೇತ್ರವನ್ನು ಸಂಸ್ಕೃತಿಯೊಂದಿಗೆ ಸಮೀಕರಿಸುವುದು ಸರಿಯಿಲ್ಲವೆಂದು ಭಾವಿಸುತ್ತಾನೆ. ಆದುದರಿಂದ, 'ಮಾರ್ಕ್ಸ್‌ವಾದಿಗಳು ತಾರ್ಕಿಕವಾಗಿ "ಸಂಸ್ಕೃತಿ" ಯನ್ನು ಇಡೀ ಜೀವನ ವಿಧಾನವಾಗಿ, ಒಂದು ಸಾಮಾನ್ಯ ಸಾಮಾಜಿಕ ಪ್ರಕ್ರಿಯೆಯಾಗಿ ಬಳಸಬೇಕು' ಎಂದು ಅವನು ಹೇಳುತ್ತಾನೆ.

**ಕಾರ್ಮಿಕ-ವರ್ಗದ ಸಂಸ್ಕೃತಿ ಮತ್ತು ಬೂರ್ಜ್ವಾ ಸಂಸ್ಕೃತಿ**

ವಿಲಿಯಮ್ಸ್‌ನ ಸ್ವಂತ ಅಧ್ಯಯನಗಳು ಕಾರ್ಮಿಕ-ವರ್ಗದ ಸಂಸ್ಕೃತಿಯ ಒಂದು ವಿಶ್ಲೇಷಣೆಯನ್ನು ಒಳಗೊಳ್ಳುತ್ತದೆ.

ಕೈಗಾರಿಕಾ ಕ್ರಾಂತಿಯ ಅವಧಿಯಲ್ಲಿ ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಕಾರ್ಮಿಕ ವರ್ಗದಿಂದ ಸೃಷ್ಟಿಯಾದ ಕಲೆ ಮತ್ತು ಸಾಹಿತ್ಯಗಳು ಸಾಪೇಕ್ಷವಾಗಿ ಕಡಿಮೆ ಇದ್ದವು, ಆದರೆ ಅವರು ತಮ್ಮದೇ ಆದ ವಿಶಿಷ್ಟ ಜೀವನಶೈಲಿ ಮತ್ತು ಸಂಸ್ಥೆಗಳನ್ನು ರೂಪಿಸಿಕೊಂಡರು. ವಿಲಿಯಮ್ಸ್ ಪ್ರಕಾರ ಸಾಮೂಹಿಕವಾಗಿ ಕ್ರಿಯೆಯಲ್ಲಿ ತೊಡಗುವುದಕ್ಕೆ ಬದ್ಧರಾಗಿರುವುದು ಕಾರ್ಮಿಕ-ವರ್ಗದ ಸಂಸ್ಕೃತಿಯ ಆಧಾರವಾಗಿತ್ತು. ಕಾರ್ಮಿಕ ವರ್ಗದ ಪ್ರತಿಯೊಬ್ಬರು ಸಹ ವ್ಯಕ್ತಿಗತವಾಗಿ ತಮ್ಮನ್ನು ರಕ್ಷಿಸಿಕೊಳ್ಳಲು ದುರ್ಬಲರಾಗಿದ್ದರು ಮತ್ತು ವ್ಯಕ್ತಿಗತ ಪ್ರಯತ್ನಗಳ ಮೂಲಕ ಯಶಸ್ಸು ಹೊಂದಲು ಅವರ ಬದುಕಿನಲ್ಲಿನ ಅವಕಾಶಗಳು ಸೀಮಿತವಾಗಿದ್ದವು. ಆದ್ದರಿಂದ, ಕಾರ್ಮಿಕ-ವರ್ಗದ ಸಂಸ್ಕೃತಿಯು, 'ಅದು ಕಾರ್ಮಿಕ ಸಂಘಟನೆಯಾಗಿರಲಿ, ಸಹಕಾರಿ ಚಳುವಳಿಗಳಾಗಿರಲಿ, ಅಥವಾ ರಾಜಕೀಯ ಪಕ್ಷವಾಗಿರಲಿ ಒಂದು ಸಾಮೂಹಿಕ ಪ್ರಜಾಸತ್ತೀಯ ಸಂಸ್ಥೆಗಳ ಮೂಲಕ' ರೂಪುಗೊಂಡಿವೆ.

ಸಾಮೂಹಿಕ ಕಾರ್ಮಿಕ-ವರ್ಗ ಮತ್ತು ವ್ಯಕ್ತಿ ವೈಶಿಷ್ಟ್ಯದ (individualistic) ಬೂರ್ಜ್ವಾ ಸಂಸ್ಕೃತಿಯ ನಡುವೆ ಒಂದು ಸಾಮಾನ್ಯ ವೈರುಧ್ಯವನ್ನು ವಿಲಿಯಮ್ಸ್ ಗುರುತಿಸುತ್ತಾನಾದರೂ ಅವುಗಳ ನಡುವೆ ಒಂದು ನಿರುಪಾಧಿಕವಾದ ಮತ್ತು ಸ್ಪಷ್ಟವಾದ ವ್ಯತ್ಯಾಸ ಇದೆ ಎಂದು ಅವನು ನಂಬುವುದಿಲ್ಲ. ಬೂರ್ಜ್ವಾ ಮತ್ತು ಕಾರ್ಮಿಕ-ವರ್ಗದ ಸಂಸ್ಕೃತಿಯು ಸ್ವಲ್ಪ ಮಟ್ಟಿಗೆ ಪರಸ್ಪರ ಅತಿವ್ಯಾಪಿಸುತ್ತವೆ. 'ಈ ಜೀವನ ವಿಧಾನಗಳ ನಡುವೆ ಒಂದು ನಿರಂತರವಾದ ಅಂತರ್‌ಕ್ರಿಯೆ ಇರುತ್ತದೆ ಮತ್ತು ಇವೆರಡಕ್ಕೂ ಸೇರಿದ ಅಥವಾ ಆಧಾರವಾಗಿರುವ ಸರಿಯಾಗಿ ವಿವರಿಸಬಹುದಾದಂತಹ ಒಂದು ಕ್ಷೇತ್ರವಿದೆ' ಎಂದು ಹೇಳುತ್ತಾನೆ. ಅಲ್ಲದೆ, ಸಂಸ್ಕೃತಿಗಳು ವರ್ಗ ರಚನೆಗಳ ಸಹಜವಾಗಿ ನಿರ್ಧರಿತವಾದ ಸೃಷ್ಟಿಗಳಾಗಿರುವುದಿಲ್ಲ. ಬದಲಿಗೆ, ತಮ್ಮ ಆರ್ಥಿಕ ಸಂದರ್ಭಗಳಿಗೆ ಪ್ರತಿಸ್ಪಂದಿಸುವ ಜನರಿಂದ ಅದು ಸಕ್ರಿಯವಾಗಿ ಸೃಷ್ಟಿಯಾಗುತ್ತದೆ.

**ಉಳಿದ ಹಾಗೂ ಹೊರಹೊಮ್ಮುವ, ಪರ್ಯಾಯ ಮತ್ತು ವಿರೋಧಾತ್ಮಕ ಸಂಸ್ಕೃತಿ**

ವಿಲಿಯಮ್ಸ್ ನಂತರದ ತನ್ನ ಕೃತಿಯಲ್ಲಿ (1978) ವರ್ಗ ಮತ್ತು ಸಂಸ್ಕೃತಿ ನಡುವಿನ ಸಂಬಂಧಗಳ ಕುರಿತಾದ ಅವನ ಚಿಂತನೆಗಳನ್ನು ಬೆಳೆಸಲು ಪ್ರಯತ್ನಿಸುತ್ತಾನೆ. ತನ್ನ ಹಿಂದಿನ

**Commented [k11]:** Changed it to kaarmika to contextualize it to the industrial revolution and the idea of a worker

ಕೃತಿಯಲ್ಲಿ ಹೇಳಿದಂತೆ ಅವನು, ಸಮಾಜದಲ್ಲಿ ಒಂದು ಬದಲಾಯಿಸಲಾಗದ (monolithic), ಸಂಪೂರ್ಣ ಪ್ರಾಬಲ್ಯವಿರುವ ಆಳುವ-ವರ್ಗದ ಐಡಿಯಾಲಜಿ ಇದೆ ಎನ್ನುವುದನ್ನು ನಿರಾಕರಿಸುತ್ತಾನೆ. ಪ್ರಾಬಲ್ಯವಿರುವ ಐಡಿಯಾಲಜಿಯೊಂದು ಇರಬಹುದಾದರೂ ಪರ್ಯಾಯ ಐಡಿಯಾಲಜಿಗಳಿಂದ ಅದು ಪ್ರಶ್ನೆಗಳಿಗೆ ಒಳಪಡುವ ಸಾಧ್ಯತೆಯಿದೆ. **ಉಳಿದ ಐಡಿಯಾಲಜಿಗಳು (residual ideologies)** (ಅವನತಿ ಹೊಂದುತ್ತಿರುವ ಆದರೆ ಇನ್ನೂ ಮಹತ್ವದ್ದಾಗಿರುವ ಒಂದು ವರ್ಗದ ಐಡಿಯಾಲಜಿ) **ಅಥವಾ ಹೊರಹೊಮ್ಮುವ ಐಡಿಯಾಲಜಿಗಳು (emergent ideologies)** (ಆಳುವ ವರ್ಗಕ್ಕೆ ಬಾಹ್ಯವಾಗಿರುವ ಹೊಸ ಗುಂಪುಗಳು) ಇರಬಹುದು. ಉಳಿದ ಮತ್ತು ಹೊರಹೊಮ್ಮುವ ಐಡಿಯಾಲಜಿಗಳು ಒಂದೋ **ವಿರೋಧಾತ್ಮಕ (oppositional)** (ಪ್ರಬಲವಾಗಿರುವ ಐಡಿಯಾಲಜಿಗಳಿಗೆ ವಿರುದ್ಧವಾಗಿರುವುದು) ಇಲ್ಲವೆ, **ಪರ್ಯಾಯವಾದ (alternative)** ದ್ದಾಗಿರಬಹುದು (ಪ್ರಬಲ ಐಡಿಯಾಲಜಿಯನ್ನು ಪ್ರಶ್ನಿಸದ ಅದರೊಂದಿಗೆ ಒಟ್ಟಿಗಿರುವ ಐಡಿಯಾಲಜಿಗಳು).

ಹೀಗೆ, ವಿಲಿಯಮ್ಸ್ ಪ್ರಕಾರ ಆಳುವ ವರ್ಗದ ಹೊರಗಿರುವ ಗುಂಪುಗಳಿಗೆ ಪ್ರಬಲ ಐಡಿಯಾಲಜಿಗಳನ್ನು ಒಪ್ಪುವ ಅಥವಾ ನಿರಾಕರಿಸುವ ಯಾವುದೇ ಅನಿವಾರ್ಯತೆ ಇರುವುದಿಲ್ಲ. ಎರಡೂ ಬಗೆಯ ಪ್ರತಿಕ್ರಿಯೆಗಳು ಸಾಧ್ಯವಿದೆ, ಹಾಗೆಯೆ ಜನರು ಪ್ರಬಲ ಐಡಿಯಾಲಜಿಯ ಕೆಲವು ಅಂಶಗಳನ್ನು ಒಪ್ಪಿ ಮತ್ತೆ ಕೆಲವನ್ನು ತಿರಸ್ಕರಿಸುವ ಸಾಧ್ಯತೆ ಇದೆ.

**ವಿಲಿಯಮ್ಸ್‌ನ ಮೌಲ್ಯಮಾಪನ**

ವಿಲಿಯಮ್ಸ್‌ನ ಚಿಂತನೆಗಳು ಇತರ ಬರಹಗಾರರು ಕಾರ್ಮಿಕ-ವರ್ಗದ ಸಂಸ್ಕೃತಿಗಳನ್ನು ಗಂಭೀರವಾಗಿ ಪರಿಗಣಿಸಲು ಮತ್ತು ಆದ್ದರಿಂದ ಅವುಗಳನ್ನು ಕುರಿತು ಅಧ್ಯಯನ ಮಾಡಲು ಪ್ರೋತ್ಸಾಹಿಸಿದವು. ಇಂತಹ ಬರಹಗಾರರು ಮಾರ್ಕ್ಸ್‌ವಾದದ ನಿಯತಿ ವಾದವನ್ನು ಒಳಗೊಂಡ ವಿಧಾನಗಳ ರೂಪಾಂತರಗಳಿಂದ ದೂರ ಸರಿದು ನಿರ್ದಿಷ್ಟ ಐತಿಹಾಸಿಕ ಸಂದರ್ಭಗಳನ್ನು ಹಾಗೂ ಮಾನವ ಸೃಜನಶೀಲತೆಯನ್ನು ಪರಿಗಣನೆಗೆ ತೆಗೆದುಕೊಳ್ಳಲು ಪ್ರಯತ್ನಿಸಿದರು. ಅದೇನೇ ಇದ್ದರೂ, ಅವರು ನಿಜವಾಗಿಯೂ ಆರ್ಥಿಕ ಮತ್ತು ಸಂಸ್ಕೃತಿಯ ನಡುವಿನ ನಿಖರ ಸಂಬಂಧದ ಪ್ರಶ್ನೆಯನ್ನು ಪರಿಹರಿಸಲಿಲ್ಲ.

ಇದಲ್ಲದೆ, ಕಾರ್ಮಿಕ-ವರ್ಗದ ಸಂಸ್ಕೃತಿ ಎನ್ನುವಂತಹ ಸಂಗತಿಯನ್ನು ಪ್ರತ್ಯೇಕಿಸಲು ಕಷ್ಟವೆಂದು ಅನೇಕ ಸಮಕಾಲೀನ ಸಿದ್ಧಾಂತಿಗಳು (ಉದಾಹರಣೆಗೆ, ಹೆಚ್ಚಿನ ಆಧುನಿಕೋತ್ತರ ಸಿದ್ಧಾಂತಿಗಳು) ವಾದಿಸಿದ್ದಾರೆ ಮತ್ತು ಕಾರ್ಮಿಕ ವರ್ಗವು ವಿಲಿಯಮ್ಸ್ ವಿವರಿಸಿರುವಂತಹ ಒಂದು ಸಾಮೂಹಿಕವಾದ ಸಂಸ್ಕೃತಿಯನ್ನು ಉಳಿಸಿಕೊಂಡಿರುತ್ತಾರೆ ಎನ್ನುವುದನ್ನು ಅವರು ಖಂಡಿತವಾಗಿಯೂ ನಿರಾಕರಿಸುತ್ತಾರೆ (ಉದಾಹರಣೆಗೆ, ನೋಡಿ ಪು.84-5). ಇಂತಹ ಸಿದ್ಧಾಂತಿಗಳ ಪ್ರಕಾರ ಕಾರ್ಮಿಕ-ವರ್ಗದ ಸಂಸ್ಕೃತಿಯು ಆಧುನಿಕ ಸಮಾಜಗಳಲ್ಲಿ ಮುಖ್ಯವಾಗಿದಿದ್ದರೂ ಕೂಡ ಆಧುನಿಕೋತ್ತರದ ಸಮಾಜಗಳಲ್ಲಿ ಹಾಗಿರುವುದಿಲ್ಲ. ಇದು ವಿಲಿಯಮ್ಸ್‌ನ ಕಾರ್ಮಿಕ-ವರ್ಗದ ಸಂಸ್ಕೃತಿಯ ಐತಿಹಾಸಿಕ ಅಧ್ಯಯನಗಳು

ಅಸಮರ್ಥನೀಯವೆಂದು ತೋರಿಸಿಕೊಡದಿದ್ದರೂ ಕೂಡ ಅವನ ಸಿದ್ಧಾಂತಗಳು ಸಮಕಾಲೀನ ಸಮಾಜವನ್ನು ಅರ್ಥೈಸಿಕೊಳ್ಳಲು ಉಪಯುಕ್ತವಾಗಿವೆಯೇ ಎನ್ನುವುದರ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಇತರ ಸಂಶೋಧನೆಯು ಕಾರ್ಮಿಕ-ವರ್ಗದ ಜೀವನಶೈಲಿಯು ಸಾಂಸ್ಕೃತಿಕವಾಗಿ ವಿಶಿಷ್ಟವಾಗಿರುತ್ತವೆ ಎನ್ನುವುದನ್ನು ಸೂಚಿಸುತ್ತವೆ (ನೋಡಿ ಪು.೬೭-೩ ).

(ಯುವ ಸಂಸ್ಕೃತಿಯ ನವ-ಮಾರ್ಕ್ಸ್‌ವಾದಿ ಸಿದ್ಧಾಂತದ ಉದಾಹರಣೆಗಾಗಿ ನೋಡಿ ಪು.೭೭೧-4.)

## ಸಮೂಹ ಸಂಸ್ಕೃತಿ

೧೯೫೦ರಲ್ಲಿ ಯಾವುದನ್ನು **ಸಮೂಹ ಸಂಸ್ಕೃತಿ (mass culture)** ಎಂದು ಕರೆಯಲಾಗುತ್ತಿತ್ತೊ ಅದರ ಪರಿಣಾಮದ ಬಗ್ಗೆ ಬಹಳಷ್ಟು ಕಳವಳ ಉಂಟಾಗಿತ್ತು. ಸಮೂಹ ಮಾಧ್ಯಮಗಳ ಬೆಳವಣಿಗೆಯು ಸಾಮಾನ್ಯ ಜನರ ಸಂಸ್ಕೃತಿಯನ್ನು ಕೆಡಿಸಿ ಪಾಶ್ಚಿಮಾತ್ಯ ಸಮಾಜಗಳಲ್ಲಿ ಸಮಸ್ಯೆ ಹಾಗೂ ಅಪಾಯಗಳನ್ನು ಹುಟ್ಟುಹಾಕುತ್ತಿದೆ ಎಂದು ವಾದಿಸಲಾಯಿತು. ಅಮೇರಿಕಾದಲ್ಲಿ ವಿಶೇಷವಾಗಿ ಈ ದೃಷ್ಟಿಕೋನವು ಬಹಳ ಪ್ರಭಾವಶಾಲಿಯಾಗಿದ್ದು ೧೯೫೭ರಲ್ಲಿ ಬರ್ನಾರ್ಡ್ ರೋಸೆನ್‌ಬರ್ಗ್ (Bernard Rosenberg) ಇದನ್ನು ವ್ಯಕ್ತಪಡಿಸಿದರು. ಡ್ವೈಟ್ ಮೆಕ್ಡಾನಲ್ಡ್ (Dwight Macdonald) ಅವರ ಕೃತಿಯಲ್ಲಿ ಸಮೂಹ ಸಂಸ್ಕೃತಿಯ ಒಂದು ಸಮಗ್ರವಾದ ವಿಮರ್ಶೆಯನ್ನು ಅಭಿವೃದ್ಧಿಪಡಿಸಲಾಯಿತು. ಅವರ ದೃಷ್ಟಿಕೋನಗಳನ್ನು ನಾವೀಗ ನೋಡೋಣ.

## ಡ್ವೈಟ್ ಮೆಕ್ಡಾನಲ್ಡ್ – ಸಮೂಹ ಸಂಸ್ಕೃತಿ ಒಂದು ಸಿದ್ಧಾಂತ

### ಸಂಸ್ಕೃತಿಯ ವಿಧಗಳು

ಮೆಕ್ಡಾನಲ್ಡ್ **ಜಾನಪದ ಕಲೆ (folk art)**, **ಶ್ರೇಷ್ಠ ಸಂಸ್ಕೃತಿ (high culture)** ಹಾಗೂ **ಸಮೂಹ ಸಂಸ್ಕೃತಿ (mass culture)** ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ.

ಕೈಗಾರಿಕಾ-ಪೂರ್ವದ ಸಮಾಜಗಳಲ್ಲಿನ **ಜಾನಪದ ಕಲೆ (folk art) ಯನ್ನು** 'ಸಾಮಾನ್ಯ ಜನರ ಸಂಸ್ಕೃತಿಯಾಗಿ' ಅವನು ಪರಿಗಣಿಸಿದನು. ಇದು 'ಮೂಲ ಬೇರಿನಿಂದ ಬೆಳೆದು ಬಂದಿತು. ಇದು ಬುಡಕಟ್ಟು (autochthonous) ಜನರ ಸಹಜ ಅಭಿವ್ಯಕ್ತಿಯಾಗಿ, ಅವರಿಂದಲೇ ರೂಪುಗೊಂಡ, ಬಹುಮಟ್ಟಿಗೆ ಶ್ರೇಷ್ಠ ಸಂಸ್ಕೃತಿಯಿಂದ ಯಾವುದೇ ಪ್ರಯೋಜನ ಪಡೆಯದ, ತಮ್ಮ ಸ್ವಂತ ಅಗತ್ಯಗಳಿಗೆ ಸರಿಹೊಂದುವಂತೆ ಬೆಳೆದುಬಂದಿದೆ ' (Macdonald (ಮೆಕ್ಡಾನಲ್ಡ್), ೧೯೫೭). ಜಾನಪದ ಸಂಸ್ಕೃತಿಯು ಮಹತ್ವವಾದ ಕಲೆಯನ್ನೇನು ಸೃಷ್ಟಿ ಮಾಡಲಿಲ್ಲ, ಆದರೆ ಅದು ತನ್ನದೇ ಆದ ಸೀಮಿತ ರೀತಿಯಲ್ಲಿ ಸ್ವಲ್ಪ ಮಟ್ಟಿಗೆ ಅರ್ಹತೆಯನ್ನು ಹೊಂದಿತ್ತು ಮತ್ತು ಅದು ಪ್ರಾಮಾಣಿಕವಾಗಿತ್ತು. ಇದು ಜನರು ಅಂತರ್‌ಕ್ರಿಯೆಯಿಸುತ್ತಿದ್ದ ನೈಜ ಸಮುದಾಯಗಳಿಂದ ಹೊರಹೊಮ್ಮಿದ್ದಾಗಿತ್ತು.

**ಶ್ರೇಷ್ಠ ಸಂಸ್ಕೃತಿ (High culture)** ಯನ್ನು ಅಷ್ಟೊಂದು ಸ್ಪಷ್ಟವಾಗಿ ವ್ಯಾಖ್ಯಾನಿಸಿರಲಿಲ್ಲ. ಮೆಕ್ಡಾನಲ್ಡ್ ಬಹುತೇಕ ವಿವರಿಸುವ ಅಗತ್ಯವಿಲ್ಲದ ಸ್ವಯಂವೇದ್ಯವೆನ್ನುವ ಅರ್ಥದಲ್ಲಿ ಅದನ್ನು ತೆಗೆದುಕೊಂಡಿದ್ದನು. ಆದಾಗ್ಯೂ, ಅವನು  ಕೇವಲ ಪ್ರಸಿದ್ಧ ಕಲಾವಿದರ, ಸಂಗೀತಗಾರರ ಮತ್ತು ಬರಹಗಾರರ ಶ್ರೇಷ್ಠ ಕೃತಿಗಳನ್ನು (ಉದಾಹರಣೆಗೆ ಲಿಯೊನಾರ್ಡೊ ಡ ವಿನ್ಸಿ, ಬೀಟೋವನ್ ಮತ್ತು ಶೇಕ್ಸ್‌ಪಿಯರ್) ಮಾತ್ರ ಶ್ರೇಷ್ಠ ಸಂಸ್ಕೃತಿಯ ಉದಾಹರಣೆಗಳಾಗಿ ನೋಡಲಿಲ್ಲ. ಅವನು ೨೦ನೇ ಶತಮಾನದ ಅವಾನ್ ಗಾರ್ಡ್‌ಗಳ (**ಅವಾನ್ ಗಾರ್ಡ್ (avant-garde)** ಪದವು ದತ್ತ ಕ್ಷೇತ್ರದಲ್ಲಿ ಸವಾಲಿನ ಮತ್ತು ಮೂಲ ಕೃತಿಗಳನ್ನು ರಚಿಸುವಲ್ಲಿ ತೊಡಗಿದ ಕಲಾವಿದರನ್ನು ಉಲ್ಲೇಖಿಸುತ್ತದೆ) ಕೃತಿಗಳನ್ನು ಸಹ ಸೇರಿಸಲಾಗಿದೆ.ಮೆಕ್ಡಾನಲ್ಡ್ ವರ್ಣಚಿತ್ರಕಾರ ಪಿಕಾಸೊ (Picasso), ಕವಿ ರಿಂಬಾಡ್ (Rimbaud), ಸಂಗೀತ ಸಂಯೋಜಕಾರ ಸ್ಟ್ರವಿನ್ಸ್ಕಿ(Stravinsky) ಮತ್ತು ಬರಹಗಾರ ಜೇಮ್ಸ್ ಜಾಯ್ಸ್ (James Joyce) ಇವರುಗಳನ್ನು ಅವಾನ್ ಗಾರ್ಡ್ ಪಟ್ಟಿಗೆ ಸೇರಿಸಿದನು.  ಇಂತಹವರ ಅರ್ಹತೆಯನ್ನು ಗುರುತಿಸುವ ಕೆಲವೇ ಕೆಲವರು ಇಷ್ಟಪಡುವ ಕೃತಿಗಳನ್ನು ಸೃಷ್ಟಿಸಲು ಸಮರ್ಥರಾದ  ಖ್ಯಾತ ವ್ಯಕ್ತಿಗಳು ಸೃಷ್ಟಿಸಿದ್ದನ್ನು ಶ್ರೇಷ ಸಂಸ್ಕೃತಿ ಎಂದು ಗುರುತಿಸಲಾಯಿತು.

**ಸಮೂಹ ಸಂಸ್ಕೃತಿ (Mass culture)**ಯು ಜಾನಪದ ಕಲೆ ಅಥವಾ ಶ್ರೇಷ್ಠ ಸಂಸ್ಕೃತಿ ಇವೆರಡಕ್ಕಿಂತ ಬಹಳ ಭಿನ್ನವಾಗಿದೆ. ಇದಕ್ಕೆ ಅರ್ಹತೆ ಎನ್ನುವುದು ಏನಾದರೂ ಇದ್ದರೆ ಅದು ಅತ್ಯಂತ ಕನಿಷ್ಟ ಮಟ್ಟದಲ್ಲಿದೆ. ಉದ್ದೇಶಪೂರ್ವಕವಾಗಿ ಸರಳೀಕರಿಸಲ್ಪಟ್ಟ ಮತ್ತು ಬಹುಪಾಲು ಜನರಿಗೆ  ಇಷ್ಟವಾಗುವಂತೆ ಇದನ್ನು ವಿನ್ಯಾಸಗೊಳಿಸಲಾಗುತ್ತದೆ. ಇದು ಯಾರಿಗೂ ಸವಾಲೊಡ್ಡುವುದಿಲ್ಲ ಮತ್ತು ಮಹತ್ವವಾದದ್ದೇನನ್ನೂ ಹೇಳುವುದಿಲ್ಲ. ಜಾನಪದ ಕಲೆಯಯು ವ್ಯಕ್ತಪಡಿಸುವ ರೀತಿಯಲ್ಲಿ ಇದು ಒಂದು ನೈಜ ಸಂಸ್ಕೃತಿಯನ್ನು ಅಭಿವ್ಯಕ್ತಿಸುವುದಿಲ್ಲ, ಅಥವಾ ಶ್ರೇಷ್ಠ ಸಂಸ್ಕೃತಿಯ ಹಾಗೆ ಇದರಲ್ಲಿ ಅಂತರ್ಗತವಾದ ಯಾವುದೇ ಕಲಾತ್ಮಕವಾದ ಮೌಲ್ಯವನ್ನು ಸಾಧಿಸುವುದಿಲ್ಲ. ಇದೊಂದು ಕೇವಲ ಪ್ರಮಾಣೀಕರಿಸಲಾದ ಮತ್ತು ಲಾಭಕ್ಕೆಂದು ಜನಸಮೂಹದ ಮೇಲೆ ವ್ಯಾಪಾರವು ಹೇರಲಾದ ಕಿಟ್ಸ್. (**ಕಿಟ್ಸ್ (kitsch)** ಎನ್ನುವುದು ಜನಪ್ರಿಯ ಸಂಸ್ಕೃತಿಗೆ ಸಂವಾದಿಯಾಗಿರುವ  ಒಂದು ಜರ್ಮನ್ ಭಾಷೆಯ ಪದವಾಗಿದೆ. ಇದೊಂದು ಬೈಗುಳದ ಪದವಾಗಿದ್ದು ಬುದ್ಧಿಹೀನ, ಬೆಲೆಯಿಲ್ಲದ ಎನ್ನುವ ಇಂಗಿತವನ್ನು ಹೊಂದಿದೆ.) ಮೆಕ್ಡಾನಲ್ಡ್ ಪ್ರಕಾರ:

> ಸಮೂಹ ಸಂಸ್ಕೃತಿಯು ಮೇಲಿನಿಂದ ಹೇರಲ್ಪಡುತ್ತದೆ. ಇದನ್ನು ಉದ್ಯಮಿಗಳಿಂದ ನೇಮಕವಾದ ತಂತ್ರಜ್ಞರಿಂದ ತಯಾರಿಸಲಾಗುತ್ತದೆ; ನಿಷ್ಕ್ರಿಯ ಗ್ರಾಹಕರು ಇದರ ಪ್ರೇಕ್ಷಕರಾಗಿದ್ದು ಖರೀದಿಸುವ ಮತ್ತು ಖರೀದಿಸದಿರುವ ನಡುವಿನ ಆಯ್ಕೆಗೆ ಮಾತ್ರ ಅವರ ಭಾಗವಹಿಸುವಿಕೆ ಸೀಮಿತವಾಗಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಲಾಭವನ್ನು ಗಳಿಸಲು ಮತ್ತು/ಅಥವಾ ತಮ್ಮ ವರ್ಗದ ಆಳ್ವಿಕೆಯನ್ನು ಕಾಪಾಡಿಕೊಂಡು ಹೋಗಲು ಕಿಟ್ಸ್‌ನ ಒಡೆಯರು ಜನಸಮೂಹದ ಸಾಂಸ್ಕೃತಿಕ ಅಗತ್ಯಗಳನ್ನು ದುರ್ಪಯೋಗಪಡಿಸಿಕೊಳ್ಳುತ್ತಾರೆ. ಮೆಕ್ಡಾನಲ್ಡ್ ೧೯೫೭.

ಮೆಕ್ಡಾನಲ್ಡ್‌ಗೆ ಸಮೂಹ ಸಂಸ್ಕೃತಿಯು ಶ್ರೇಷ್ಠ ಸಂಸ್ಕೃತಿಗೆ ಒಂದು ಅಪಾಯವಾಗಿ ಕಂಡಿತು. ರೋಸೆನ್‌ಬರ್ಗ್‌ನ ಹಾಗೆ ಅವನು ಸಮೂಹ ಸಂಸ್ಕೃತಿಯು ನಿರಂಕುಷತ್ವದ ಒಂದು ಅಪಾಯವನ್ನು ಹುಟ್ಟುಹಾಕುತ್ತದೆ ಎಂದು ಭಾವಿಸಿದನು. ಸಾಮೂಹಿಕ ಸಮಾಜ ಮತ್ತು ಸಮೂಹ ಸಂಸ್ಕೃತಿ ಸೋವಿಯತ್ ರಷ್ಯಾದಲ್ಲಿ ಕಮ್ಯೂನಿಸ್ಟ್ ಆಳ್ವಿಕೆಯನ್ನು ಸಾಧ್ಯಗೊಳಿಸದವು ಮತ್ತು ಹಿಟ್ಲರ್‌ನು ಅಧಿಕಾರದ ಗದ್ದುಗೆಗೇರಲು ಅನುವು ಮಾಡಿಕೊಟ್ಟವು ಎಂದು ಮೆಕ್ಡಾನಲ್ಡ್ ಯೋಚಿಸಿದನು. ಕೇವಲ ಸಂಸ್ಕೃತಿ ಮಾತ್ರ ಅಪಾಯವನ್ನೆದುರಿಸುತ್ತಿರಲಿಲ್ಲ, ರಾಜಕೀಯ ಹಿಡಿತವೂ ಸಹ ಅಪಾಯದಲ್ಲಿತ್ತು. ಮೆಕ್ಡಾನಲ್ಡ್, ಮಾರ್ಕ್ಸ್‌ವಾದಿಗಳ ವಾದವನ್ನು ಸ್ವಲ್ಪ ಮಟ್ಟಿಗೆ ಹೋಲುವ ಅದೇ ನಿಟ್ಟಿನಲ್ಲಿ, ಸಮೂಹ ಸಂಸ್ಕೃತಿಯನ್ನು ಆಳುವ ವರ್ಗದ ಒಂದು ಸಂಭಾವ್ಯ ಸಾಧನವೆಂಬಂತೆ ನೋಡುತ್ತಾನೆ.

**ಸಮೂಹ ಸಂಸ್ಕೃತಿಯ ಸಮಸ್ಯೆಗಳು**

ಸಮೂಹ ಸಂಸ್ಕೃತಿಯು ಏಕೆ ಇಷ್ಟೊಂದು ಸಮಸ್ಯಾತ್ಮಕವಾಗಿದೆ? ಎಂಬುದಕ್ಕೆ ಮೆಕ್ಡಾನಲ್ಡ್ ಹಲವಾರು ಪ್ರತಿಪಾದನೆಗಳನ್ನು ಮುಂದಿಡುತ್ತಾನೆ:

1. ಕೆಟ್ಟ ಸಂಸ್ಕೃತಿಯು ಉತ್ತಮ ಸಂಸ್ಕೃತಿಯನ್ನು ಹೊರದಬ್ಬುತ್ತದೆ ಎಂದು ಅವನು ನಂಬಿದ್ದನು. ಜನರಿಗೆ ಸಮೂಹ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗಿತ್ತು. ಇದಕ್ಕೆ ಮಾನಸಿಕವಾಗಿ ಹೆಚ್ಚಿನ ಶ್ರಮ ಬೇಕಾಗಿರಲಿಲ್ಲ. ಆದ್ದರಿಂದ ಇದಕ್ಕೆ ಸಂಸ್ಕೃತಿಯನ್ನು ದುರ್ಬಲಗೊಳಿಸುವ ಪ್ರವೃತ್ತಿಯನ್ನು ಹೊಂದಿತ್ತು. ಮೆಕ್ಡಾನಲ್ಡ್ ಹೇಳುವಂತೆ:

> ಇದು ತನ್ನ ನಿರ್ದಯ, ಮನಸ್ಸಿನ ಸ್ವಾಸ್ಥ್ಯ ತಪ್ಪಿಸುವ ಪ್ರಮಾಣ ಮತ್ತು ಸಂಪೂರ್ಣವಾಗಿ ವ್ಯಾಪಿಸುವ ಲಕ್ಷಣಗಳಿಂದ ಶ್ರೇಷ್ಠ ಸಂಸ್ಕೃತಿಗೆ ಅಪಾಯನ್ನೊಡ್ಡುತ್ತದೆ. ಸಮೂಹದ ಅತ್ಯಂತ ಒರಟು ಅಭಿರುಚಿಗಳಿಂದ ಹಣವನ್ನು ಮಾಡಲು ಮತ್ತು ಅವರ ಮೇಲಿನ ತಮ್ಮ ರಾಜಕೀಯ ಪ್ರಾಬಲ್ಯವನ್ನು ಸಾಧಿಸಲು ಪ್ರಾರಂಭಿಸುವ ಮೇಲ್ವರ್ಗದವರು ಅಂತಿಮವಾಗಿ ಅವರೇ ಮುಂದಾಲೋಚನೆಯಿಲ್ಲದೆ ಬಳಸಿದ ಸಾಧನವು ಅವರದೇ ಸಂಸ್ಕೃತಿಯ ಮೇಲೆ ದಾಳಿ ಮಾಡುವುದನ್ನು ಮತ್ತು ಅದನ್ನು ಸರ್ವನಾಶ ಮಾಡುವ ಅಪಾಯವನ್ನು ಕಾಣುತ್ತಾರೆ. ಮೆಕ್ಡಾನಲ್ಡ್, 1957

**ಲಘು ಶಬ್ದಕೋಶ**

ರಾಚನಿಕ – Structural

ವ್ಯಕ್ತಿಯಾಗುವಿಕೆ – Individuation

ಅಪವರ್ತನೆ – deviant

ಲಾಂಛನ – totem

ಜೀವ–ಕ್ರಿಯೆಯ – life-activity

ಮಿಥ್ಯಾ ಪ್ರಜ್ಞೆ – false consciousness

ಹೊರಹೊಮ್ಮುವ - emergent